ಸ್ವಾಯತ್ತತೆ   ಸ್ವಯಂ ಆಡಳಿತ   ಸ್ವಯಂ ನಿಯಂತ್ರಣ   ನಮ್ಮ ಧ್ಯೇಯ

ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 11   Issue - 3   Swabhimani Sahakari Monthly   Pages - 20   ₹ - 12   March 2013

ವೈದ್ಯನಾಥ

ಭೀಮಾಶಂಕರ

ಕೇದಾರನಾಥ

ಮಹಾಕಾಲೇಶ್ವರ

ಮಲ್ಲಿಕಾರ್ಜುನ

ಓಕಾರೇಶ್ವರ

ದ್ವಾದಶ ಜ್ಯೋತಿರ್ಲಿಂಗ

ಸೌರಾಷ್ಟ್ರೇ ಸೋಮನಾಥ ಚ ಶ್ರೀಶೈಲೆ ಮಲ್ಲಿಕಾರ್ಜುನಂ ।
ಉಜ್ಜಯಿನಾಂ ಮಹಾಕಾಲಂ ಓಂಕಾರೇ ಮಹಾಬಲೇಶ್ವರಂ ॥

ಪರಲ್ಯಾಂ ವೈದ್ಯನಾಥಂ ಚ ಢಾಕಿನ್ಯಾಂ ಭೀಮೇಶ್ವರಂ।
ಸೇತುಬಂಧೇ ತು ರಾಮೇಶಂ ನಾಗೇಶಂ ದ್ವಾರಕಾವನೇ॥

ವಾರಾಣ್ಯಾಸ್ಯಾಂ ಚ ವಿಶ್ವೇಶಂ ತ್ರ್ಯೈಯಂಬಕಂ ಗೌತಮಿ ತಟೇ ।
ಹಿಮಾಲಯೇ ತು ಕೇದಾರಾಂ ಗ್ರೀಷ್ಣೇಶು ಚ ಶಿವಾಲಯೇ ॥

ಏತಾನಿ ಜ್ಯೋತಿರ್ಲಿಂಗಾನಿ ಸಾಯಂ ಪ್ರಾತಃ ಪಠೇನ್ನರಃ ।
ಸಪ್ತಜನ್ಮಕೃತಂ ಪಾಪಂ ಸ್ಮರಣೇನ ವಿನಶ್ಯತಿ ॥

ಮಹಾ ಶಿವರಾತ್ರಿ, ಹೋಳಿ ಹಾಗೂ ಮಹಿಳಾ ದಿನಾಚರಣೆಯ ಶುಭಾಶಯಗಳು

ಅಧ್ಯಕ್ಷರು, ಉಪಾಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು ಹಾಗೂ ಆಡಳಿತ ಮಂಡಳಿ.

ಸೋಮ್‌ನಾಥ

ತ್ರಯಂಬಕೇಶ್ವರ

ನಾಗೇಶ್ವರ

ಕಾಶಿ ವಿಶ್ವನಾಥ



ರಾಮೇಶ್ವರ

ಗ್ರೀಷ್ಣೇಶ್ವರ

ಸೌಹಾರ್ದ ಸಹಕಾರಿಗಳ ಸಂಖ್ಯೆ : 2390 - 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ - 491

ಅಧ್ಯಕ್ಷರ ಮಾತು

ನಮ್ಮ ಇಂದಿನ ನಡೆ
ಬದಲಾವಣೆ ಸ್ವೀಕರಿಸಿ; ಅಭಿವೃದ್ಧಿ ಸಾಧಿಸಿ

ದೇಶದ ಸಹಕಾರ ವ್ಯವಸ್ಥೆಯನ್ನು ಭದ್ರಗೊಳಿಸುವ, ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಸಂಜೀವಿನಿಯಾಗಿ ಪರಿಣಮಿಸಿದ 97 ಸಂವಿಧಾನ ತಿದ್ದುಪಡಿಯು ಸಹಕಾರ ಕ್ಷೇತ್ರದಲ್ಲಿ ಹೊಸ ಅಧ್ಯಾಯವನ್ನು ಬರೆಯಲು ಭೂಮಿಕೆಯನ್ನು ಸಿದ್ಧಪಡಿಸಿದೆ. ಸಂವಿಧಾನಾತ್ಮಕ ಮಾನ್ಯತೆ ನೀಡುವುದರ ಜೊತೆಗೆ ಸಹಕಾರ ಕ್ಷೇತ್ರದ ಸಾಧನೆಗಳಿಗೂ ಮಾನ್ಯತೆ ನೀಡುವುದಲ್ಲದೇ ಈ ಕ್ಷೇತ್ರ ಈ ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ ಎಂಬ ಸಂದೇಶವನ್ನು ನೀಡಿದೆ. ದೇಶದ ರಾಜ್ಯದ ಆಡಳಿತಗಾರರಲ್ಲಿ ಸಹಕಾರ ಕ್ಷೇತ್ರಕ್ಕೆ ಹೆಚ್ಚಿನ ಮಹತ್ವವನ್ನು ನೀಡುವ ಬಗ್ಗೆ ಪರೋಕ್ಷವಾಗಿ ಸೂಚನೆಯನ್ನು ನೀಡಿದೆ. ಸರಕಾರದ ಅತೀವ ಹಸ್ತಕ್ಷೇಪಕ್ಕೆ ಅಂತ್ಯ ಹಾಡಿದೆ.

ಪರಿಣಾಮವಾಗಿ ಸಹಕಾರಿ ಕ್ಷೇತ್ರದ ಮುಂದೆ ಹಲವಾರು ಸವಾಲುಗಳು ಉದ್ಭವವಾಗಿವೆ. ಈ ಸವಾಲುಗಳನ್ನು ಸ್ವೀಕರಿಸುವ ಮಾನಸಿಕ ಸಿದ್ಧತೆ, ಸವಾಲುಗಳನ್ನು ಎದುರಿಸುವ ವ್ಯವಸ್ಥೆಗಳನ್ನು ಸಿದ್ಧತೆಗಳನ್ನೂ ಮಾಡಿಕೊಳ್ಳುವುದು ನಮ್ಮ ಪ್ರಥಮ ಸವಾಲು. ಇದು ಅನಿವಾರ್ಯವೂ ಕೂಡ. ಸಂಪೂರ್ಣ ವ್ಯವಹಾರಿಕ ಸ್ವಾಯತ್ತತೆಯನ್ನು ಸ್ವೇಚ್ಛಾಚಾರವಾಗದಂತೆ ಎಚ್ಚರಿಕೆಯಿಂದ ಕಾರ್ಯನಿರ್ವಹಿಸುವುದು ಸದುಪಯೋಗಪಡಿಸುವುದು ಎರಡನೇ ಮಹತ್ವದ ಸವಾಲು, ಸಹಕಾರಿ ಚುನಾವಣಾ ಆಯೋಗದ ಮೂಲಕ ಆಡಳಿತ ಮಂಡಳಿಯ ಹಾಗೂ ಪದಾಧಿಕಾರಿಗಳ ಚುನಾವಣೆ ಅತ್ಯಂತ ಮಹತ್ವದ ಸವಾಲು, ಲೆಕ್ಕಪರಿಶೋಧನೆಯನ್ನು ಮತ್ತೆ ಹಿಂದಿನಂತೆ ಲೆಕ್ಕಪರಿಶೋಧನಾ ಇಲಾಖೆಯ ಉಸ್ತುವಾರಿಯಲ್ಲಿ ನಡೆಸುವುದು, ವಾರ್ಷಿಕ ಮಹಾ ಸಭೆಗಳನ್ನು ಮುಂದೂಡದೆ ನಿಗದಿತ ಸಮಯದಲ್ಲಿ ಅಂದರೆ ಸೆಪ್ಟೆಂಬರ್ 25ರ ಒಳಗಾಗಿ ನಡೆಸುವುದು, ಸಹಕಾರ ಸಂಘಗಳ ನಿಬಂಧಕರಿಗೆ ವಾರ್ಷಿಕ ವರದಿಯನ್ನು ಕಡ್ಡಾಯವಾಗಿ ಸೆಪ್ಟೆಂಬರ 30ರ ಒಳಗಾಗಿ ಕಳುಹಿಸವುದು, ಸದಸ್ಯತ್ವವನ್ನು ನಿರಾಕರಿಸದಿರುವುದು ಹೀಗೆ ಇನ್ನೂ ಅನೇಕ ಬದಲಾವಣೆಗಳು ಸಹಕಾರಿ ಕ್ಷೇತ್ರಕ್ಕೆ ಸವಾಲುಗಳಾಗಿ ಪರಿಣಮಿಸಿವೆ. ಇವುಗಳನ್ನು ಸ್ವೀಕರಿಸುವುದು ಅನಿವಾರ್ಯ. ಸಹಕಾರಿ ಕ್ಷೇತ್ರದಲ್ಲಿ ಬಾಹ್ಯ ಹಾಗೂ ಸರಕಾರದ ಹತೋಟಿಯನ್ನು ಕಡಿಮೆಮಾಡುವ ದೃಷ್ಟಿಯಿಂದ ಸಹಕಾರಿ ಕ್ಷೇತ್ರದ ಅಭಿವೃದ್ಧಿಯ ದೃಷ್ಟಿಯಿಂದ ಮಾಡಲಾಗಿರುವ ಈ ಬದಲಾವಣೆಗಳನ್ನು ಸಹಕಾರಿಗಳು ನಾವೆಲ್ಲ ಒಪ್ಪಿಕೊಳ್ಳಲೇಬೇಕಾಗಿರುವುದು ಅನಿವಾರ್ಯ.

ಈ ಬದಲಾವಣೆಯನ್ನು ಸಹಕಾರಿಗಳ ಪದಾಧಿಕಾರಿಗಳು ಆಡಳಿತ ಮಂಡಳಿಯವರು ಸಮಗ್ರವಾಗಿ ಅಧ್ಯಯನಮಾಡುವುದು ಅಗತ್ಯ. ಜೊತೆಗೆ ಸಹಕಾರಿಯ ಎಲ್ಲ ಸದಸ್ಯರಿಗೂ ತಿಳುವಳಿಕೆಯಾಗುವಂತೆ ಬೃಹತ ಅಭಿಯಾನವನ್ನು ಸಹಕಾರಿಗಳು ಹಮ್ಮಿಕೊಂಡು ಸದಸ್ಯರನ್ನು ಪ್ರಜ್ಞಾವಂತರನ್ನಾಗಿಸುವುದು ಸಧ್ಯದ ಆದ್ಯತಾ ವಲಯವಾಗಬೇಕು. ಮುಂಬರುವ ದಿನಗಳಲ್ಲಿ ಸಹಕಾರಿ ನಡೆ ಅತ್ಯಂತ ಚುರುಕಾಗಿ ಕರಾರುವಾಕ್ಕಾಗಿ ಪ್ರಗತಿದಾಯಕವಾಗಿ ನಡೆಯಬೇಕಿದೆ. ಈ ನಿಟ್ಟಿನಲ್ಲಿ ಎಲ್ಲ ಸಹಕಾರಿಗಳು ಕ್ರಮವಿಡುವುದು ಅಗತ್ಯವೆಂದು ನನ್ನ ಭಾವನೆ. ಇದು ನಿಮ್ಮ ಅಭಿಪ್ರಾಯ ಹಾಗೂ ಕಾರ್ಯಯೋಜನೆಯಾಗಲಿ ಎಂದು ಸಂಯುಕ್ತ ಸಹಕಾರಿಯ ಅಪೇಕ್ಷೆ.

– ಎಸ್.ಆರ್.ಸತೀಶಚಂದ್ರ

ಸಹಕಾರಿ ಕ್ಷೇತ್ರದ ಮುಂದೆ ಹಲವಾರು ಸವಾಲುಗಳು ಉದ್ಭವವಾಗಿವೆ. ಈ ಸವಾಲುಗಳನ್ನು ಸ್ವೀಕರಿಸುವ ಮಾನಸಿಕ ಸಿದ್ಧತೆ, ಸವಾಲುಗಳನ್ನು ಎದುರಿಸುವ ವ್ಯವಸ್ಥೆಗಳನ್ನು ಸಿದ್ಧತೆಗಳನ್ನೂ ಮಾಡಿಕೊಳ್ಳುವುದು ನಮ್ಮ ಪ್ರಥಮ ಸವಾಲು.

ಭಾರತ ಸಂವಿಧಾನದ 97ನೇ ತಿದ್ದುಪಡಿಯ ಹಿನ್ನೆಲೆಯಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿಗಳ ಅಧಿನಿಯಮ 1997ರ ತಿದ್ದುಪಡಿ ಅಧಿಸೂಚನೆ ಸಂಧಿಸಿದಂತೆ ನಿಬಂಧಕರ ಅಧೇಶವನ್ನು ಸಹಕಾರಿಗಳ ಮಾಹಿತಿಗಾಗಿ ಪ್ರಕಟಿಸಿದೆ.

ಕರ್ನಾಟಕ ಸರ್ಕಾರ
(ಸಹಕಾರ ಇಲಾಖೆ)

ಸಹಕಾರ ಸಂಘಗಳ ನಿಬಂಧಕರ ಕಛೇರಿ ನಂ-1, ಅಲಿ ಆಸ್ಕರ್ ರಸ್ತೆ, ಬೆಂಗಳೂರು – 52

ಸಂಖ್ಯೆ: ಆರ್‌ಎಸ್‌ಆರ್/ಎಕ್ಸ್‌ಎಂಸಿ/164/2012-13 ದಿನಾಂಕ : 26.02.2013

ವಿಷಯ : ರಾಜ್ಯದಲ್ಲಿರುವ ಸೌಹಾರ್ದ ಸಹಕಾರಿಗಳ ವಿಶೇಷ ಸರ್ವಸದಸ್ಯರ ಸಭೆ ಕರೆಯಲು ಆದೇಶಿಸಲು ಬಗ್ಗೆ .

ಉಲ್ಲೇಖ : 1) ಅಧಿಸೂಚನೆ ಸ: ಸಂವ್ಯಶಾಇ 71 ಶಾಸನ 2012, ಬೆಂಗಳೂರು , ದಿನಾಂಕ 11.01.2013

– : ಆದೇಶ :–

ಭಾರತ ಸಂವಿಧಾನದ 97ನೇ ತಿದ್ದುಪಡಿಯ ಹಿನ್ನೆಲೆಯಲ್ಲಿ ಕರ್ನಾಟಕ ಸೌಹರ್ದ ಸಹಕಾರಿಗಳ ಅಧಿನಿಯಮ 1997ಕ್ಕೆ ಉಲ್ಲೇಖ(1)ರ ಅಧಿಸೂಚನೆಯ ಮೂಲಕ ತಿದ್ದುಪಡಿ ತರಲಾಗಿದ್ದು, ಉಲ್ಲೇಖ(2) ಅಧಿಸೂಚನೆ ರೀತ್ಯಾ ಈ ತಿದ್ದುಪಡಿಯ ದಿನಾಂಕ:11.02.2013 ರಿಂದ ಜಾರಿಗೆ ಬಂದಿರುತ್ತದೆ.

ತಿದ್ದುಪಡಿ ಅವಕಾಶಗಳನ್ನು ಅನುಷ್ಠಾನಗೊಳಿಸುವ ದೃಷ್ಟಿಯಿಂದ ವಿಶೇಷ ಸರ್ವ ಸದಸ್ಯರ ಸಭೆಯನ್ನು ಕರೆಯಲು ನಿರ್ದೇಶಲ ನೀಡುವ ಔಚಿತ್ಯವನ್ನು ಮನಗಂಡು ರಾಜ್ಯದಲ್ಲಿರುವ ಎಲ್ಲಾ ಸಹಕಾರಿಗಳು ದಿನಾಂಕ:11.02.2013 ರಿಂದ 90 ದಿನಗಳೊಳಗೆ ಕೆಳಕಂಡ ಕಾರ್ಯಸೂಚಿಗಳ ಬಗ್ಗೆ ಕಾರ್ಯ ಕೈಗೊಳ್ಳುವ ಸಲುವಾಗಿ ವಿಶೇಷ ಸರ್ವ ಸದಸ್ಯರ ಸಭೆ ಕರೆಯಲು ಆದೇಶಿಸುತ್ತಿದ್ದೇನೆ.

– : ಕಾರ್ಯ ಸೂಚಿ :–

1. ಉಪವಿಧಿಗಳ ತಿದ್ದುಪಡಿ (ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ದಿನಾಂಕ : 11.02.2013ರಲ್ಲಿ ಜಾರಿಗೆ ಬಂದಿರುವ ತಿದ್ದುಪಡಿಗಳ ಅವಕಾಶಗಳನ್ನು ಉಪವಿಧಿಗಳಲ್ಲಿ ಅಳವಡಿಸಿಕೊಂಡು, ಪ್ರಸ್ತಾಪಿತ ಉಪವಿಧಿಯ ತಿದ್ದುಪಡಿಯನ್ನು ಸ್ಪಷ್ಟವಾಗಿ ನೋಟೀಸಿನಲ್ಲಿ ನಮೂದಿಸತಕ್ಕದ್ದು)
2. 2012-13ನೇ ಸಾಲಿನ ಲೆಕ್ಕಪರಿಶೋಧನೆಗೆ ಲೆಕ್ಕಪರಿಶೋಧಕರ ನೇಮಕ(ಪ್ರಕರಣ 33ರ ರೀತ್ಯಾ) (ಕಳೆದ ಸರ್ವ ಸದಸ್ಯರ ಸಭೆಯಲ್ಲಿ ಈಗಾಗಲೆ ಲೆಕ್ಕಪರಿಶೋಧಕರನ್ನು ನೇಮಿಸಿಕೊಳ್ಳದ ಸಹಕಾರಿಗಳು)
3. 2013-14ನೇ ಸಾಲಿನ ಆಯವ್ಯಯ ಮಂಜೂರಾತಿ

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಹಾಗೂ ನಿಯಾಮಾವಳಿಗಳು 2004ರ ಚೌಕಟ್ಟಿನಲ್ಲಿ ವಿಶೇಷ ಸರ್ವ ಸದಸ್ಯರ ಸಭೆಯನ್ನು ಜರುಗಿಸಲು ಕ್ರಮ ಜರುಗಿಸತಕ್ಕದ್ದು.

ಸಂವಿಧಾನಾತ್ಮಕ ತಿದ್ದುಪಡಿ ಹಾಗೂ ಸಹಕಾರಿಗಳು ಅಧಿನಿಯಮ ತಿದ್ದುಪಡಿ ಹಿನ್ನೆಲೆಯಲ್ಲಿ ರಾಜ್ಯದಲ್ಲಿರುವ ಎಲ್ರಲಾ ಸಹಕಾರಿಗಳು ಕಡ್ಡಾಯವಾಗಿ ಈ ಆದೇಶದ ಪಾಲನೆ ಮಾಡಲು ಸೂಚಿಸಲಾಗಿದೆ.

ಸಹಿ/-
(ಎಸ್.ಜಿ.ಹೆಗಡೆ)
ಸಹಕಾರ ಸಂಘಗಳ ನಿಬಂಧಕರು
ಕರ್ನಾಟಕ ರಾಜ್ಯ,ಬೆಂಗಳೂರು.

ನಿಬಂಧಕರ ಸುತ್ತೋಲೆ

ಸೌಹಾರ್ದ ಸಹಕಾರಿಗಳ ಆರ್ಥಿಕ ಸಧೃಡತೆಯ ಮಾನದಂಡಗಳು

"ಒಂದು ಸಹಕಾರಿಯು ,ನೋಂದಾಯಿತವಾದ ನಂತರ, ಆರ್ಥಿಕ ಸದೃಢತೆಯಿಂದ ಮುನ್ನಡೆಯುವ ಸಾಧ್ಯತೆಯನ್ನು ಖಚಿತಪಡಿಸಿಕೊಳ್ಳಲು ಪ್ರಸ್ತಾವಿತ ಸಹಕಾರಿಯ ಮುಖ್ಯ ಪ್ರವರ್ತಕನು ನೋಂದಾಯಿಸಬೇಕಾದ ಸದಸ್ಯರ ಸಂಖ್ಯೆ ಸಂಗ್ರಹಿಸಬೇಕಾದ ಷೇರು ಬಂಡವಾಳ ಮತ್ತು ನಿರ್ವಹಿಸಬೇಕಾದ ಇತರೆ ಮಾನದಂಡಗಳನ್ನು ನಿಬಂಧಕರು ಕಾಲಕಾಲಕ್ಕೆ ನಿಗದಿಪಡಿಸತಕ್ಕದ್ದು."

ಅಂದರೆ ಸಹಕಾರಿಯೊಂದು ನೋಂದಣಿಗೊಂಡ ಕೂಡಲೇ ಕಾರ್ಯ ಚಟುವಟಿಕೆಗಳನ್ನು ಆರಂಭಿಸಲು ಅತ್ಯವಶ್ಯಕವಾದ ಸ್ವಂತ ಸಂಪನ್ಮೂಲವನ್ನು ಷೇರು ಹಣದ ಮೂಲಕ ರೂಪಿಸಿಕೊಂಡು ತನ್ಮೂಲಕ ತನ್ನ ಧ್ಯೇಯೋದ್ಧೇಶಗಳ ಈಡೇರಿಕೆ, ವೆಚ್ಚಗಳ ಸರಿದೂಗಿಸಲು, ಸೇವೆ ಮತ್ತು ಲಾಭಾದಾಯತ್ವವನ್ನು ವೃದ್ಧಿಸಲು ಅನುವಾಗುತ್ತದೆ.

ಸಹಕಾರ ನೋಂದಣಿ ಸಂದರ್ಭದಲ್ಲಿ, ಬದಲಾದ ಸನ್ನಿವೇಶ, ಹಣದುಬ್ಬರ ಹಾಗೂ ಹಣದ ಮೌಲ್ಯದಲ್ಲಿನ ವ್ಯತ್ಯಾಸ ಸಮಕಾಲೀನ ಆರ್ಥಿಕ ಮಾನದಂಡಗಳ ಆಧಾರದ ಮೇಲೆ ಸಂಗ್ರಹಿಸಬೇಕಾದ ಪ್ರಾರಂಭಿಕ ಷೇರು ಬಂಡವಾಳ ಹಾಗೂ ಸೇರ್ಪಡೆಗೊಳಿಸಬಹುದಾದ ಪಾಲುದಾರರ (ಷೇರುದಾರರ) ಸಂಖ್ಯೆಯನ್ನು ನಿಗದಿಗೊಳಿಸಬೇಕಾಗಿದೆ.

ಯಾವುದೇ ಸಹಕಾರಿಯ ಧ್ಯೇಯೋದ್ದೇಶವು ಸೇವೆ ಮತ್ತು ಲಾಭದಾಯಕತೆಯನ್ನು ವೃದ್ಧಿಸುವುದಾಗಿದೆ. ಸಂಗ್ರಹಿಸಲಾಗುವ ಷೇರು ಹಣವನ್ನು ಸದಸ್ಯರಿಗೆ ಸಾಲ ಮುಂಗಡ ನೀಡಲು ಹಾಗೂ ಇತರೆ ಚಟುವಟಿಕೆಗಳಿಗೆ ಬಳಸಿ ಲಾಭಗಳಿಸಲು ಅನುವಾಗುತ್ತದೆ. ಷೇರು ಹಣ ಸಹಕಾರಿಯ ಸ್ವಂತ ನಿಧಿಯಾಗಹುವುದರಿಂದ ಆರ್ಥಿಕ ಸಬಲತೆಗೆ ಪೋಷಕವೂ ಹಾಗೂ ಪೂರಕವೂ ಆಗುತ್ತದೆ.

ಸಹಕಾರಿಯ ನೋಂದಣಿ ಸಂದರ್ಭದಲ್ಲಿ ಸುಸ್ಥಿರ ವ್ಯವಹಾರದ ಅಗತ್ಯತೆಗಳನ್ನು ಪಾಲಿಸಿ ಯಶಸ್ವಿಯಾಗುವ ಸನ್ನಿವೇಶಗಳ ಖಾತರತೆಯನ್ನು ಖಚಿತಪಡಿಸಿಕೊಳ್ಳಲು ಆರ್ಥಿಕ ಸದೃಧತೆಯ ಮಾನದಂಡಗಳನ್ನು ನಿಗದಿಪಡಿಸುವ ಔಚಿತ್ಯವನ್ನು ಮನಗಂಡು ಕೆಳಕಂಡ ಆದೇಶ ಹೊರಡಿಸಿದೆ.

ಕ್ರ.ಸಂ.	ಸಹಕಾರಿಯಕಾರ್ಯವ್ಯಾಪ್ತಿಯ ಜನಸಂಖ್ಯೆ	ಕನಿಷ್ಠ ಷೇರುದಾರರು	ಪ್ರಾರಂಭಿಕವಾಗಿ ಸಂಗ್ರಹಿಸಬೇಕಾದ ಷೇರು ಧನದ ಮೊತ್ತ
1	2 ಲಕ್ಷಕ್ಕಿಂತ ಕಡಿಮೆಯಿದ್ದಲ್ಲಿ	200	ರೂ.4.00 ಲಕ್ಷ
2	2 ಲಕ್ಷಕ್ಕಿಂತ ಮೇಲ್ಪಟ್ಟು 5 ಲಕ್ಷದ ವರೆಗೆ	300	ರೂ.6.00 ಲಕ್ಷ
3	5 ಲಕ್ಷದ ಮೇಲ್ಪಟ್ಟು 20 ಲಕ್ಷದ ವರೆಗೆ	500	ರೂ.10.00 ಲಕ್ಷ
4	10 ಲಕ್ಷದ ಮೇಲ್ಪಟ್ಟು 20 ಲಕ್ಷದ ವರೆಗೆ	750	ರೂ.15.00 ಲಕ್ಷ
5	20 ಲಕ್ಷದ ಮೇಲ್ಪಟ್ಟು	1000	ರೂ. 20.00 ಲಕ್ಷ

ಮಾರ್ಗಸೂಚಿಗಳು :

1) ಉದೇಶಿತ ಸೌಹಾರ್ದ ಸಹಕಾರಿಯ ನೋಂದಣಿ ಪೂರ್ವದಲ್ಲಿ ನಡೆಯುವ ಸಭೆಯಲ್ಲಿ ಕನಿಷ್ಠ 10(ಹತ್ತು) ಜನ ಪ್ರವರ್ತಕರ ಪೈಕಿ ಓರ್ವರು ಮುಖ್ಯ ಪ್ರವರ್ತಕರಾಗಿ ಆಯ್ಕೆ ಹೊಂದಿರಬೇಕು. ಪ್ರವರ್ತಕರ ಭಾವಚಿತ್ರವಿರುವ ಪರಿಚಯ ಪತ್ರ ಲಗತ್ತಿಬೇಕು. ಸಹಕಾರಿಯ ಸ್ಥಾಪನೆಗೆ ಆರ್ಥಿಕ ಸಬಲತೆ, ಕಾರ್ಯಸಾಧ್ಯತೆ (Financial viability, feasibility) ಬಗ್ಗೆ ಯೋಜನಾವರದಿ ಮತ್ತು ತಾಂತ್ರಿಕ ವರದಿ (Project report and technical report)ಗಳು ಇರಬೇಕು.
2) ಸಹಕಾರಿಯ ಉಪವಿಧಿಗಳಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮದ ಪ್ರಕರಣ 10 ಮತ್ತು ಇತ್ತೀಚೆಗೆ ತಿದ್ದುಪಡಿಯಾಗಿರುವ ಎಲ್ಲಾ ಅವಕಾಶಗಳು ಸೇರ್ಪಡೆಯಾಗಿರಬೇಕು. ಇದಲ್ಲದೆ ಉಪವಿಧಿಯಲ್ಲಿ ಕಾಲಕಾಲಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್, ನಬಾರ್ಡ್ ಮತ್ತು ಕೇಂದ್ರ /ರಾಜ್ಯ ಸರ್ಕಾರಗಳು ನೀಡಿರುವ ಸುತ್ತೋಲೆ ನಿರ್ದೇಶನಗಳನ್ನು ಉಪವಿಧಿಯಲ್ಲಿ ಅಳವಡಿಸಿಕೊಂಡಿರುವುದನ್ನು ಪಾಲಿಸಿರುವುದುನ್ನು ಖಚಿತಪಡಿಸಿಕೊಳ್ಳಬೇಕು. ಯಾವುದೇ ಕಾರಣಕ್ಕೂ ಸದಸ್ಯೇತರರಿಂದ ಠೇವಣಿ ಸಂಗ್ರಹಿಸಲು ಉಪವಿಧಿಗಳಲ್ಲಿ ಅವಕಾಶ ನೀಡತಕ್ಕದ್ದಲ್ಲ. ನಾಮಮಾತ್ರ ಸದಸ್ಯರಿಂದಲೂ ಸಹ ಠೇವಣಿ ಸ್ವೀಕರಿಸಲು ಸವಕಾಶ ಮಾಡತಕ್ಕದ್ದಲ್ಲ.
3) ಸಹಕಾರಿ ಸಂಘಟನೆ ಸಂದರ್ಭದಲ್ಲಿ ಸಹಕಾರಿಯ ಹೆಸರಿನೊಂದಿಗೆ ಸೌಹಾರ್ದ ಎಂಬ ಪದ ಮತ್ತು ಪತ್ತಿನ ಸಹಕಾರಿಗಳಲ್ಲಿ ಪತ್ತಿನ ಸೌಹಾರ್ದ ಸಹಕಾರಿ ಎಂಬ ಪದಗಳನ್ನು ಸೇರಿಸಬೇಕು. ಉದ್ದೇಶಿತ ಸಹಕಾರಿಯ ಹೆಸರನ್ನು ಈಗಾಗಲೇ ನೋಂದಣಿಯಾಗಿರುವ ಸಹಕಾರಿ ಎಂಬ ಪದಗಳನ್ನು ಸೇರಿಸಬೇಕು. ಉದ್ದೇಶಿತ ಸಹಕಾರಿಯ ಹೆಸರನ್ನು ಈಗಾಗಲೇ ನೋಂದಣಿಯಾಗಿರುವ ಸಹಕಾರ ಸಂಘ: ಸೌಹಾರ್ದ ಸಹಕಾರಿಗಳು ಬಳಸಿರಬಾರದು. ಆರ್ಥಿಕ ಸಬಲತೆ /ಕಾರ್ಯಸಾಧ್ಯತೆ, ಉದ್ದೇಶಿತ ಸೌಹಾರ್ದ ಸಹಕಾರಿಯ ನೋಂದಣಿ
4) ಉದ್ದೇಶಿತ ಸೌಹಾರ್ದ ಸಹಕಾರಿಯ ಸಹಕಾರಿಯ ಆರ್ಥಿಕ ಸಬಲತೆ ಮತ್ತು ಕಾರ್ಯಸಾಧ್ಯತರಯನ್ನು ದೃಢಪಡಿಸಿ ಕೊಂಡನಂತರ ಪ್ರಾಧಿಕಾರವು ಪತ್ತಿನ ಧ್ಯೇಯೋದ್ದೇಶವಿರುವ ಹಾಗೂ ವಿವಿದೋದ್ದೇಶ ಹಾಗೂ ವಿವಿದೋದ್ದೇಶ ಸಹಕಾರಿಗಳಗೆ ಮೇಲೆ ನಮೂದಿಸಿರುವ ಕನಿಷ್ಠ ಸದಸ್ಯರಿಂದ ಪ್ರಾರಂಭಿಕ ಷೇರುಹಣ ಸಂಗ್ರಹಿಸಲು ಸೂಚಿಸತಕ್ಕದ್ದು.
5) ಯೋಜನಾ ವರದಿಯಲ್ಲಿ ಸಹಕಾರಿಯ ಧ್ಯೇಯೋದ್ದೇಶಗಳ ಈಡೇರಿಕೆ, ಗುರಿ ಸಾಧನೆ, ಅನುಸರಿಸುವ ವಿಧಿವಿಧಾನಗಳು, ಮುನ್ನೆರ್ಪಾಟು ಇತ್ಯಾದಿಗಳನ್ನೊಳಗೊಂಡಿರಬೇಕು. ಅವುಗಳು ವಾಸ್ತವಿಕವಾಗಿರಬೇಕು. ಕಾಲ್ಪನಿಕವಾದ, ಯಾಂತ್ರಿಕವಾದ ಯೋಜನಾ ವರದಿಗಳನ್ನು ಮಾನ್ಯ ಮಾಡಬಾರದು. ನೈಜಸ್ಥಿತಿ ಹಾಗೂ ಕಾರ್ಯಕಾರಣ ಸಂಬಂಧಗಳನ್ನು ಗುರುತಿಸುವುಂತಿರಬೇಕು. ಅದನ್ನು ತಜ್ಞರು/ಪರಿಣಿತರು ಸಿದ್ಧಪಡಿಸಿರಬೇಕು.
6) ಜನಸಂಖ್ಯೆ ಪ್ರಮಾಣದ ನಿರ್ಧಾರಕ್ಕೆ 2011ರ ಜನಗಣತಿಯನ್ನು ಗಣನೆಗೆ ತೆಗದುಕೊಳ್ಳತಕ್ಕದ್ದು.
7) ಪ್ರಕರಣ 5(2) (ಡಿ) ಅನ್ವಯ ಉಪವಿಧಿಯಲ್ಲಿ ನಮೂದಿಸಿರುವ ಒಟ್ಟು ಅಧಿಕೃತ ಷೇರು ಬಂಡವಾಳದ ಮೊತ್ತಕ್ಕೆ ಶೇಕಡ ಒಂದರಷ್ಟು ನೋಂದಣಿ

ಶುಲ್ಕವನ್ನು ಕನಿಷ್ಠ ರೂ.500/– ಗರಿಷ್ಠ ರೂ.500/–ಗಳನ್ನು ನಿಗದಿಪಡಿಸಿ, ನೋಂದಣಿ ಶುಲ್ಕವನ್ನು ಸರ್ಕಾರಕ್ಕೆ ಈ ಕೆಳಕಂಡ ಲೆಕ್ಕಶೀರ್ಷಿಕೆಗೆ ಪಾವತಿಮಾಡತಕ್ಕದ್ದು.

0425–ಸಹಕಾರ–00–800–ಇತರೇ ಸ್ವೀಕೃತಿ–0–09
ನೋಂದಣಿ ಶುಲ್ಕ (ಸೌಹಾರ್ದ) 0425–00–800–0–09
0425-cooperation-090-800-other receipts-0-09
Registration fee (Souharda) 0425-00-800-0-09

8) ಮಹಿಳೆಯರೇ ಸಂಘಟಿಸುವ ಸಹಕಾರಿಗಳು ಮಹಿಳಾ ಸದಸ್ಯರು/ ನಿರ್ದಿಷ್ಟ ಸಮೂಹ ಗುಂಪಿನ ಸದಸ್ಯರು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಮತ್ತು ಅಲ್ಪಸಂಖ್ಯಾತರು ಸಂಘಟಿಸುವ ಪತ್ತಿನ ಸಹಕಾರಿಗಳಿಗೆ ಮೇಲಿನ ಯಾದಿಯಲ್ಲಿ ನಮೂದಿಸಿರುವ ಮೊತ್ತ ಹಾಗೂ ಸದಸ್ಯತ್ವದಲ್ಲಿ ಶೆ.50%ರಷ್ಟು ಮಾತ್ರ ಗುರಿ ನಿಗದಿಪಡಿಸತಕ್ಕದ್ದು

9) ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರಡಿ ನೋಂದಣಿಯಾದ ಸಹಕಾರ ಸಂಘವು ಸೌಹಾರ್ದ ಸಹಕಾರಿಯಾಗಿ ಪರಿವರ್ತನೆ ಹೊಂದಲು ಸೌಹಾರ್ದ ಸಹಕಾರಿ ಅಧಿನಿಯಮದಲ್ಲಿ ಅವಕಾಶವಿದ್ದು, ಪ್ರಕರಣ 5ರಲ್ಲಿ ತಿಳಿಸಿರುವ ಅವಶ್ಯಕ ದಾಖಲಾತಿಗಳನ್ನು ಪ್ರಸ್ತಾವೆಯೊಂದಿಗೆ ಸಲ್ಲಿಸಿದ ನಂತರ ಪರಿವರ್ತನೆಗೆ ಕ್ರಮವಿಡತಕ್ಕದ್ದು. ಅಗತ್ಯವಿದ್ದಲ್ಲಿ ಮೂಲದಾಖಲೆಗಳನ್ನು ಪರಿಶೀಲಿಸಿ ದೃಢಪಡಿಸಿಕೊಂಡ ನಂತರ ನೋಂದಣಿ ಮಾಡುವುದು. ಆದರೆ ಪರಿವರ್ತನಾ ಪೂರ್ವದಲ್ಲಿ ಸಹಕಾರ ಸಂಘಕ್ಕೆ ಕರ್ನಾಟಕ ಸಹಕಾರ ಸಂಘಗಳೂ ಅಧಿನಿಯಮ 1959ರ ಪ್ರಕರಣ 28(ಎ), 30(1) ಮತ್ತು 31ರಂತೆ ಆಡಳಿತಾಧಿಕಾರಿ: ವಿಶೇಷಾಧಿಕಾರಿ ನೇಮಕವಾಗಿರಬಾರದು.

10) ಯಾವುದೇ ಸಹಕಾರಿಯು ತನ್ನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸುವ ಸಂದರ್ಭದಲ್ಲಿ ಈಗ ಹಾಲಿಯಿರುವ ಅರ್ಥಾತ್ ಆ ಸಂದರ್ಭದ ಪೂರ್ವಸ್ಥಿತಿಯ ಅನುಮೋದನಾ ಪ್ರಾಧಿಕಾರದ ಶಿಫಾರಸ್ಸಿನೊಂದಿಗೆ ಕಾರ್ಯವ್ಯಾಪ್ತಿ ವಿಸ್ತರಣೆ ಮಾಡುವ ಅಧಿಕಾರವುಳ್ಳ ಪ್ರಾಧಿಕಾರಕ್ಕೆ ಸಲ್ಲಿಸಬೇಕು.

11) ಸೌಹಾರ್ದ ಸಹಕಾರಿ ಅಧಿನಿಯಮದಡಿ ನೋಂದಣಿಯಾಗಿರುವ ಸಹಕಾರಿಯು ಒಂದು ಸಹಕಾರ ಸಂಘವಾಗಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರಡಿ ಪರಿವರ್ತನೆ ಹೊಂದಲು ಅವಕಾಶವಿದ್ದು ಇದಕ್ಕಾಗಿ ಸೌಹಾರ್ದ ಸಹಕಾರಿಯು ತನ್ನ ಸಾಮಾನ್ಯ ಸದಸ್ಯರ ಸಭೆಯಲ್ಲಿ ಅನುಮೋದನೆ ಪಡೆದುಕೊಂಡು ಕಾರ್ಯವ್ಯಾಪ್ತಿಯ ನಿಬಂಧಕರಿಗೆ ಪ್ರಸ್ತಾವೆ ಸಲ್ಲಿಸಬಹುದು ಆದರೆ ಸೌಹಾರ್ದ ಸಹಕಾರಿಯು ಪ್ರಕರಣ 14ರಂತೆ ಪಾಲುದಾರಿಕೆ ಸಹಕಾರಿ (Partnership cooperative)ಯನ್ನಾಗಲಿ ಮತ್ತು ಪ್ರಕರಣ 15ರಂತೆ ಸಹಾಯಕ ಸಂಸ್ಥೆ (Subsidiary organization)ಯನ್ನಾಗಲಿ ಮತ್ತು ಪ್ರಕರಣ 16ರಂತೆ ಸಹಯೋಗ ಸಹಕಾರಿ (Collaboration cooperative)ಯನ್ನಾಗಲಿ, ಸ್ಥಾಪನೆ / ಸಂಘಟನೆ ಮಾಡಿರಬಾರದು. ಇದಲ್ಲದೆ ಪ್ರಕರಣ 35ರ ವಿಚಾರಣೆ ಇರಬಾರದು ಮತ್ತು ಪ್ರಕರಣ 26(2) ಮತ್ತು 38ರ ಅವಕಾಶದ ರೀತ್ಯಾ ಆಡಳಿತಾಧಿಕಾರಿ ನೇಮಕವಾಗಿರಬಾರದು.

12) ಸಹಕಾರಿಯ ಕಾರ್ಯವ್ಯಾಪ್ತಿಯನ್ನು ನಿರ್ಧರಿಸುವಾಗ ಯಾವುದೇ ಬಗೆಯ ಆಡಳಿತಾತ್ಮಕ ವಿವಾದಗಳು ಬಾರದಂತೆ ಸ್ಪಷ್ಟ ಮತ್ತು ನಿಖರ ಭೌಗೋಳಿಕ ಪ್ರದೇಶಗಳನ್ನು ಸ್ಪಷ್ಟವಾಗಿ ನಮೂದಿಸಿರಬೇಕು. ಭಾಗಶಃ ಪ್ರದೇಶ ಎಂ ಅರ್ಥವಿರಬಾರದು.

13) ಸಹಕಾರಿ ನೋಂದಣಿಯಾದ ನಂತರ ಎಲ್ಲಾ ಆದೇಶ ಪ್ರತಿಗಳನ್ನು ಉಪವಿಧಿಗಳೊಂದಿಗೆ ಸಹಕಾರಿಗಳ ನಿಬಂಧಕರಿಗೆ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಈ ಸಂಸ್ಥೆಗೆ ಸಹಕಾರಿಯ ಉಪವಿಧಿಯೊಂದಿಗೆ ಕಳುಹಿಸತಕ್ಕದ್ದು. ಸೌಹಾರ್ದ ಸಹಕಾರಿ ಬ್ಯಾಂಕ್ ಆಗಿದ್ದಲ್ಲಿ, ನೋಂದಣಿ ಆದೇಶದ ಪ್ರತಿ ಮತ್ತು ಉಪವಿಧಿ ಪ್ರತಿಗಳೊಂದಿಗೆ ಭಾರತೀಯ ರಿಸರ್ವ್ ಬ್ಯಾಂಕ್‌ಗೆ ಕಳುಹಿಸತಕ್ಕದ್ದು.

14) ಒಂದು ಪ್ರಸ್ತಾವಿತ ಸೌಹಾರ್ದ ಸಹಕಾರಿ ಬ್ಯಾಂಕ್ ಅಥವಾ ಹಾಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರಡಿ ನೋಂದಣಿಯಾದ ಸಹಕಾರ ಬ್ಯಾಂಕನ್ನು ಭಾರತೀಯ ರಿಸರ್ವ್ ಬ್ಯಾಂಕ್‌ನ ಪೂರ್ವಾನುಮತಿ ಇಲ್ಲದೆ ನೋಂದಣಿ ಮಾಡತಕ್ಕದ್ದಲ್ಲ ಅಥವಾ ಪರಿವರ್ತನೆಗೊಳಿಸತಕ್ಕದ್ದಲ್ಲ ಅಲ್ಲದೆ ಬ್ಯಾಂಕ್ ಆಗಿದ್ದ ಸಂದರ್ಭದಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ ಅನುಮತಿ ಇಲ್ಲದೆ ಪತ್ತಿನ ಸಹಕಾರಿಯಾಗಿ ಪರಿವರ್ತನೆಗೊಳಿಸಬಾರದು ಹಾಗೂ ಸದಸ್ಯತ್ವ, ಕಾರ್ಯವ್ಯಾಪ್ತಿ, ಷೇರುಹಣ ಸಂಗ್ರಹಣೆ ಇತ್ಯಾದಿ ಸಂದರ್ಭದಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳನ್ನು ಪಾಲಿಸುವುದು. ಸಹಕಾರಿ ಬ್ಯಾಂಕಿನ ನೋಂದಣಿಗೆ ಭಾರತೀಯ ರಿಸರ್ವ್ ಬ್ಯಾಂಕಿನ ಪೂರ್ವಾನುಮತಿಯಿಲ್ಲದೇ ಷೇರು ಸಂಗ್ರಹಣೆಗೆ ಅನುಮತಿ ನೀಡತಕ್ಕದ್ದಲ್ಲ.

15) ಸೌಹಾರ್ದ ಸಹಕಾರಿ ಅಧಿನಿಯಮದಡಿ ಹೊಸದಾಗಿ ಗೃಹನಿರ್ಮಾಣ ಸಹಕಾರಿ ನೋಂದಣಿ ಮಾಡತಕ್ಕದ್ದಲ್ಲ ಅಥವಾ ಯಾವುದೇ ಗೃಹ ನಿರ್ಮಾಣ ಸಹಕಾರ ಸಂಘವನ್ನು ಸೌಹಾರ್ದ ಸಹಕಾರಿಯಾಗಿ ಪರಿವರ್ತಿಸಿ ನೋಂದಣಿ ಮಾಡತಕ್ಕದ್ದಲ್ಲ.

16) ಸಾವಯವ ಕೃಷಿ ಸಹಕಾರಿಗಳ ನೋಂದಣಿಯ ಸಂದರ್ಭದಲ್ಲಿ ಈ ಕಛೇರಿಯ ಸುತ್ತೋಲೆ ಸಂಖ್ಯೆ:ಆರ್.ಎಸ್.ಆರ್/01/ನೋಂದಣಿ/2011–12, ದಿನಾಂಕ 03.05.2011ರ ಸೂಚನೆಗಳನ್ನು ಪಾಲಿಸತಕ್ಕದ್ದು.

17) ಸಹಕಾರಿಗಳ ನೋಂದಣಿ ಸಂದರ್ಭದಲ್ಲಿ ಪರಿಭಾಷೆ, ವ್ಯಾಖ್ಯಾನ, ಮಾರ್ಗಸೂಚಿ ಇತ್ಯಾದಿಗಳಲ್ಲಿ ಗೊಂದಲ, ಸಂಶಯಗಳುಂಟಾದಲ್ಲಿ ಕೇಂದ್ರ ಕಛೇರಿಯ ಸಲಹೆ ಸೂಚನೆ ಪಡೆದು ನೋಂದಣಿ ಮಾಡತಕ್ಕದ್ದು.

18) ಕಾಲಕಾಲಕ್ಕೆ ಸರ್ಕಾರ, ನಿಬಂಧಕರು ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ನೀಡುವ ನಿರ್ದೇಶನಗಳನ್ನು ಪಾಲಿಸುವುದು.

19) ಯಾವುದೇ ಸಹಕಾರಿಯು ತನ್ನ ಕಾರ್ಯವ್ಯಾಪ್ತಿ ವಿಸ್ತರಣೆ ಕೋರಿ ಸಲ್ಲಿಸುವ ಉಪವಿಧಿ ತಿದ್ದುಪಡಿ ಸಂದರ್ಭದಲ್ಲಿ ಮೇಲಿನ ಕೋಷ್ಟಕದಲ್ಲಿ ನಮೂದಿಸಿರುವ ಸದಸ್ಯರು (ಷೇರುದಾರರು) ಹಾಗೂ ಸಂದಾಯಿತ ಷೇರು ಬಂಡವಾಳವನ್ನು ಹೊಂದಿದ್ದಲ್ಲಿ (ಆಯಾ ಭೌಗೋಳಿಕ ವ್ಯಾಪ್ತಿಯ ಜನಸಂಖ್ಯೆಯನ್ನಾಧರಿಸಿ) ಮಾತ್ರ ಕಾರ್ಯ ವ್ಯಾಪ್ತಿಯನ್ನು ಸಕ್ಷಮಪ್ರಾಧಿಕಾರಿಗಳು ವಿಸ್ತರಿಸತಕ್ಕದ್ದು.

ಈ ಆದೇಶದ ಪರಿಣಾಮವಾಗಿ ಉಲ್ಲೇಖ(1) ಮತ್ತು (2) ಸುತ್ತೋಲೆಗಳನ್ನು ಹಿಂಪಡೆಯಲಾಗಿದೆ. ಈ ಮಾರ್ಗಸೂಚಿಗಳು ಈ ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುತ್ತವೆ.

ಸಹಿ/–
(ಎಸ್.ಜಿ. ಹೆಗಡೆ)
ಕರ್ನಾಟಕ ರಾಜ್ಯ, ಬೆಂಗಳೂರು.

ಸೌಹಾರ್ದ ಸಹಕಾರಿಗಳ ನಿರ್ದೇಶಕರಿಗಾಗಿ ತರಬೇತಿ ಕಾರ್ಯಕ್ರಮ 2013-14

ಸಂಯುಕ್ತ ಸಹಕಾರಿಯ 2013–14ರಲ್ಲಿ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ ಗುಣಮಟ್ಟ ನಿರ್ವಹಣೆಯ ತರಬೇತಿ ಕಾರ್ಯಗಾರಗಳನ್ನು 2013 ಏಪ್ರಿಲ್ ಮಾಹೆಯಲ್ಲಿ “ಸಹಕಾರಿ ಆಡಳಿತ ನಿರ್ವಹಣಾ ತರಬೇತಿ ಕೇಂದ್ರ” ಪದ್ಮನಾಭನಗರ, ಬೆಂಗಳೂರಿನಲ್ಲಿ ಹಮ್ಮಿಕೊಳ್ಳಲಾಗುವುದು. ತರಬೇತಿಯಲ್ಲಿ ಭಾಗವಹಿಸಲು ಇಚ್ಛಿಸುವವರು ನೋಂದಣಿ ಶುಲ್ಕ ರೂ.1000/– ಗಳನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಹೆಸರಲ್ಲಿ ಪಾವತಿಸಿ ಹೆಸರನ್ನು ನೋಂದಾಯಿಸಿಕೊಳ್ಳಲು ಕೋರಿದೆ.

ತರಬೇತಿಯ ಅವಧಿ ಎರಡು ದಿನಗಳು. ಊಟ, ವಸತಿ ಅಧ್ಯಯನ ಸಾಹಿತ್ಯಗಳನ್ನು ಸಂಯುಕ್ತ ಸಹಕಾರಿಯು ವ್ಯವಸ್ಥೆಮಾಡುತ್ತದೆ.

ಒಂದು ಸಹಕಾರಿಯಿಂದ ಕನಿಷ್ಠ ಇಬ್ಬರು ನಿರ್ದೇಶಕರು ಭಾಗವಹಿಸಬಹುದಾಗಿದೆ. ಒಂದು ತರಬೇತಿ ತಂಡದಲ್ಲಿ 60 ಜನರಿಗೆ ಮಾತ್ರ ಅವಕಾಶವಿರುತ್ತದೆ. ನೋಂದಾಯಿತ ಪ್ರತಿನಿಧಿಗಳ ಸಂಖ್ಯೆಗೆ ಅನುಸಾರವಾಗಿ ತಂಡಗಳನ್ನು ರಚಿಸಿ ತರಬೇತಿಯ ದಿನಾಂಕಗಳನ್ನು ನಿಗಧಿಗೊಳಿಸಿ ತಿಳಿಸಲಾಗುವುದು. ತರಬೇತಿಯಲ್ಲಿ ಭಾಗವಹಿಸುವುದಕ್ಕಾಗಿ ಬೆಂಗಳೂರುಗೆ ಬಂದು ಹೋಗುವ ಪ್ರಯಾಣ ವೆಚ್ಚವನ್ನು ಸಹಕಾರಿಯಿಂದಲೇ ಭರಿಸಬೇಕಾಗುತ್ತದೆ. ಕೂಡಲೇ ಹೆಸರನ್ನು ನೋಂದಾಯಿಸಲು ಕೋರಿದೆ.

ಜನಹಿತ ಸೌಹಾರ್ದ ಸಹಕಾರಿ ಮಣಿಪಾಲ ನೂತನ ಶಾಖೆ ಉದ್ಘಾಟನೆ

ಸೌಹಾರ್ದ ಆಡಿಟ್ ವ್ಯವಸ್ಥೆ 350 ಮಂದಿಯ ಆಡಿಟ್ ಪ್ಯಾನೆಲ್‌ನಲ್ಲಿ ಲೆಕ್ಕ ಪರಿಶೊಧಕರ ಆಯ್ಕೆ ಅವಕಾಶವಿದ್ದರೆ, ಈಗ ಸರಕಾರ ಆಡಿಟ್ ಇಲಾಖೆಯ 10 ಲೆಕ್ಕ ಪರಿಶೋಧಕರ ಪೈಕಿ ಒಬ್ಬರ ಆಯ್ಕೆಯ ಅವಕಾಶ ನೀಡಿದ್ದು ಸರಿಯಲ್ಲ. ಸರಕಾರಿ ಆಡಿಟ್ ಇಲಾಖೆ ನಡೆಸಿದ ಆಡಿಟ್‌ನ್ನು ಆದಾಯ ತೆರಿಗೆ ಇಲಾಖೆ ಒಪ್ಪುತ್ತಿಲ್ಲ. ವೃತ್ತಿಪರ ಲೆಕ್ಕಪರಿಶೋಧನೆಗೆ ಸೌಹಾರ್ದ ಸಹಕಾರಿಗೆ ಸ್ವಾಯತ್ತೆ ನೀಡಬೇಕು ಎಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಅಧ್ಯಕ್ಷ ಎಸ್.ಆರ್.ಸತೀಶ್ಚಂದ್ರ ತಿಳಿಸಿದರು.

ಮಣಿಪಾಲದ ಸಿಂಡಿಕೇಟ್ ಬ್ಯಾಂಕ್ ಪ್ರಧಾನ ಕಛೇರಿ ಬಳಿಯ ನಗರಸಭೆ ಉಪ ಕಛೇರಿ ಕಟ್ಟಡದಲ್ಲಿ ಬುಧವಾರ ನಡೆದ ಜನಹಿತ ಸೌಹಾರ್ದ ಸಹಕಾರಿ ನಿ. ಮಣಿಪಾಲ ಶಾಖೆ ಉದ್ಘಾಟನೆ ಸಮಾರಂಭದಲ್ಲಿ ಭದ್ರತಾ ಕೊಠಡಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಕೇಂದ್ರ ಸರಕಾರದ 97ನೇ ತಿದ್ದುಪಡಿಯಿಂದ ಸೌಹಾರ್ದ ಸಹಕಾರಿಗೆ ತೊಂದರೆಯಾಗಿದೆ. ಡೈರೆಕ್ಟ್‌ಟ್ಯಾಕ್ಸ್ ಕೋಡ್ ಮೂಲಕ ಸಹಕಾರಿ ರಂಗದ ಲಾಭಾಂಶಕ್ಕೆ ಶೇ.33 ತೆರಿಗೆ ವಿಧಿಸಬಾರದು. ಸೌಹಾರ್ದ ಸಹಕಾರಿ ಸಾರ್ವಜನಿಕ ಸೇವೆಗಾಗಿದೆ ಶಾಸನ ಬದ್ಧ ಚುನಾಯಿತ ಬಾಡಿ ವ್ಯವಸ್ಥೆ ಕರ್ನಾಟಕದಲ್ಲಿ ಮಾತ್ರವಿದ್ದು ಇದು ದೇಶಾದ್ಯಂತ ಜಾರಿಗೆ ಬರಬೇಕು ಎಂದು ಒತ್ತಾಯಿಸಿದರು.

ಶಾಸಕ ಶ್ರೀ ಕೆ.ರಘುಪತಿಭಟ್ ಕಾರ್ಯಕ್ರಮ ಉದ್ಘಾಟಿಸಿದರೆ, ಜಿ.ಪಂ. ಅಧ್ಯಕ್ಷ ಉಪೇಂದ್ರ ನಾಯಕ್, ದಕ್ಷಿಣ ಕನ್ನಡ ಮೀನುಗಾರಿಕಾ ಫೆಡರೇಶನ್ ಅಧ್ಯಕ್ಷ ಯಶಪಾಲ್ ಸುವರ್ಣ, ಸೌಹಾರ್ದ ಸಂಯುಕ್ತ ಸಹಕಾರಿ ನಿರ್ದೇಶಕ ಭಾಸ್ಕರ ಕಾಮತ್, ಜನಹಿತ ಸೌಹಾರ್ದ ಸಹಕಾರಿ ನಿ. ಅಧ್ಯಕ್ಷ ಗೋಪಾಲ್ ಯು., ಉಪಾಧ್ಯಕ್ಷ ಸದಾನಂದಪ್ರಭು, ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಿಜಯ, ನಿರ್ದೇಶಕರಾದ ವೈ.ಎಸ್. ಮಡಿವಾಳ (ಸ್ಥಾಪನಾಧ್ಯಕ್ಷ), ಶ್ರೀ ಗೋಪಾಲ ಸಿ.ಮೂಲ್ಯ, ಶ್ರೀ ವಸಂತ ನಾಯ್ಕ್, ಕೃಷ್ಣ.ಎಂ.ಸಾಲ್ಯಾನ್, ಕೃಷ್ಣ.ಯು.ವಿ, ಮಂಜುನಾಥ್ ನಾಯ್ಕ್, ಬಾಲಕೃಷ್ಣ.ಎ.ಎಸ್, ವಿಜಯ ಶೆಟ್ಟಿ, ಶಶಿಧರನ್, ಶ್ರೀಮತಿ ಚೇತನಾ.ಜಿ. ನಾಯಕ್ ಉಪಸ್ಥಿತರಿದ್ದರು.

ಪ್ರಾಮಾಣಿಕತೆಯೆ ಸೇವೆಯ ಅಡಿಪಾಯ "ಸಹಕಾರ ರತ್ನ" ಶ್ರೀ ಆರ್.ಎಸ್.ಹುಚ್ಚಾಚಾರಿ

ಯಾವುದೇ ಸೇವೆಯಾಗಿರಬಹುದು ಪ್ರಾಮಾಣಿಕತೆಯೇ ಅಡಿಪಾಯ; ಇದನ್ನು ಪಾಲನೆಯಿಂದ ನೈತಿಕತೆಯ ಮಟ್ಟದೊಂದಿಗೆ ವ್ಯಕ್ತಿತ್ವದ ಮೆರಗು ಹೆಚ್ಚುತ್ತದೆ ಎಂದು ಸಹಕಾರ ಇಲಾಖೆಯ ನಿವೃತ್ತ ಅಪರನಿಬಂಧಕರಾದ ಶ್ರೀ ಆರ್.ಎಸ್.ಹುಚ್ಚಾಚಾರಿಯವರು ಕಿವಿಮಾತೇಳಿದರು.

2012ನೇ ಸಾಲಿನ ಕರ್ನಾಟಕ ಸರಕಾರದ ಪ್ರತಿಷ್ಠಿತ ಸಹಕಾರ ರತ್ನ ಪ್ರಶಸ್ತಿ ನೀಡಿರುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಹಿರಿಯ ನಿರ್ದೇಶಕರಾದ ಶ್ರೀ ಎಸ್.ಆರ್. ಲಕ್ಷ್ಮಿಕಾಂತರೆಡ್ಡಿಯವರು ಶಾಲು ಹೊದಿಸಿ ಸನ್ಮಾಸಿದರು. ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಫಲತಾಂಬೂಲ ನೀಡಿದರು. ನಿರ್ದೇಶಕರೆಲ್ಲ ಅಭಿನಂದಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿಯ ಕರಡು ಸಿದ್ಧಪಡಿಸುವ ಸಮಯದ ಕೆಲಸ ಕಾರ್ಯಗಳನ್ನು ನೆನಪಿಸಿಕೊಂಡ ಅವರು, ಸರಕಾರದ ಸೇವೆಗೆ ಸೇರಿದ ದಿನದಿಂದ ನಿವೃತ್ತಿಯ ದಿನದವರೆವಿಗೂ ಯಾವುದೇ ಲೋಪಗಳಿಗೆ ಒಳಗಾಗದೆ ಪ್ರಾಮಾಣಿಕತೆಯನ್ನು ಕಾಯ್ದುಕೊಂಡು ಬರುವಲ್ಲಿ ಭಗವಂತ ನನಗೆ ಸಹಾಯಮಾಡಿದ್ದಾನೆ ಎಂದು ಸ್ಮರಿಸಿದರು.

ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತೀಕರ, ನಿರ್ದೇಶಕ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಉಪಪ್ರಧಾನ ವ್ಯವಸ್ಥಾಪಕ ಶ್ರೀ ವೈ.ಕುಮಾರರವರು ಶ್ರೀಯುತರ ಕಾರ್ಯವೈಖರಿಯನ್ನು ಪ್ರಶಂಶಿಸಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ಎಸ್.ಆರ್.ಸತೀಶಚಂದ್ರ ಮಾತನಾಡಿ ನಮ್ಮ ಹಿಂದಿನ ಅನೇಕರು ಪ್ರಾಮಾಣಿಕತೆ, ಸತ್ಯನುಡಿ, ಶಿಸ್ತು ಪಾಲನೆಯಿಂದ ಸಾಧಕರಾಗಿದ್ದಾರೆ. ಆ ಸಾಧಕರ ಸಾಲಿನಲ್ಲಿ ಶ್ರೀ ಆರ್. ಎಸ್.ಹುಚ್ಚಾಚಾರಿಯವರು ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೇ ನಿಷ್ಠೆ, ದಕ್ಷತೆ, ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸಿದ್ದರ ಫಲವಾಗಿ ಇವರು ಸಹಕಾರ ರತ್ನ ಪ್ರಶಸ್ತಿಗೆ ಭಾಜನರಾಗಿದ್ದಾರೆ ಎಂದು ಹರ್ಷಿಸಿದರು. ಸಭೆಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕ ಮಂಡಳಿಯ ಸದಸ್ಯರು ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ.ಪಾಟೀಲ್ ಹಾಗೂ ಸಿಬ್ಬಂದಿಯವರು ಉಪಸ್ಥಿತರಿದ್ದರು.

ಶ್ರೀ ವೀರತಪಸ್ವಿ ಸೌಹಾರ್ದ ಪತ್ತಿನ ಸಹಕಾರಿ ಉದ್ಘಾಟನೆ

ನೂತನ ಸೌಹಾರ್ದ ಸಹಕಾರಿಯಾದ ಶ್ರೀ ವೀರತಪಸ್ವಿ ಸೌಹಾರ್ದ ಪತ್ತಿನ ಸಹಕಾರಿ ನಿ., ಸರಸಂಬಾ, ಆಳಂದ ತಾಲೂಕು, ಗುಲಬರ್ಗಾ ಜಿಲ್ಲೆ. ಇದರ ಉದ್ಘಾಟನಾ ಸಮಾರಂಭವು ದಿನಾಂಕ. 13-01-2013 ರ ರವಿವಾರದಂದು ಸರಸಂಬಾ ಗ್ರಾಮದಲ್ಲಿ ನಡೆಯಿತು. ಸದರಿ ಸಹಕಾರಿಯ ಉದ್ಘಾಟನಾ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಶ್ರೀ. ಷ.ಬ್ರ. ಮಲ್ಲಿಕಾರ್ಜುನ ಪಂಡಿತಾರಾಧ್ಯ ಶಿವಾಚಾರ್ಯರು ವಹಿಸಿ, ನೂತನ ಸೌಹಾರ್ದ ಸಹಕಾರಿಯನ್ನು ಉದ್ಘಾಟಿಸಿದರು.

ವಿಳಾಸ ಬದಲಾವಣೆಯ ವಿವರ ತಿಳಿಸಿ

ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರಿಗಳು ತಮ್ಮ ಕಚೇರಿಯನ್ನು ಬದಲಾಯಿಸಿದ ಕೂಡಲೇ ಸಂಯುಕ್ತ ಸಹಕಾರಿಗೆ ಬದಲಾದ ವಿಳಾಸವನ್ನು ತಿಳಿಸುವ ಕ್ರಮ ಅಗತ್ಯ. ಜೊತೆಗೆ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಬದಲಾವಣೆಯಾದ ಸಂದರ್ಭಗಳಲ್ಲಿ ಸದರಿಯವರ ವಿವರಗಳನ್ನು (ಹೆಸರು, ವಿಳಾಸ, ಮೊಬೈಲ್ ಸಂಖ್ಯೆ ಹಾಗೂ ಇ-ಮೇಲ್ ಐಡಿ) ಕೂಡಲೇ ಸಂಯುಕ್ತ ಸಹಕಾರಿಗೆ ತಿಳುಹಿಸಲು ಕೋರಿದೆ. ಸಂಯುಕ್ತ ಸಹಕಾರಿಯ ಪತ್ರಗಳು, ಪ್ರಕಟಣೆಗಳನ್ನು ಸರಿಯಾದ ಸಮಯಕ್ಕೆ ಸರಿಯಾದ ವ್ಯಕ್ತಿಗೆ ಸರಿಯಾದ ವಿಳಾಸಕ್ಕೆ ಕಳುಹಿಸಲು ಸಾಧ್ಯವಾಗುತ್ತದೆ ಆದ್ದರಿಂದ ವಿವರಗಳನ್ನು ಕಳುಹಿಸಿ ಸಹಕರಿಸಲು ಕೋರಿದೆ.

ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ ತರಬೇತಿ ಅಭಿಯಾನ

ಏಪ್ರೀಲ್ ಮಾಹೆಯಲ್ಲಿ 97ನೇ ಸಂವಿಧಾನ ತಿದ್ದುಪಡಿ, ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ ಅಧಿನಿಯಮ ಹಾಗೂ ಸಹಕಾರಿಗಳು ತಮ್ಮ ಉಪವಿಧಿಗಳಲ್ಲಿ ಅಳವಡಿಸಬಹುದಾದ ತಿದ್ದುಪಡಿ ಕುರಿತಾದ ತರಬೇತಿ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯು ಹಮ್ಮಿಕೊಳ್ಳಲಿದೆ.

ಆದೇಶ ರದ್ದು

ಸಹಕಾರಿಗಳ ಜಂಟಿ ನಿಬಂಧಕರು ಮೈಸೂರು ಪ್ರಾಂತ, ಮೈಸೂರು. ಇವರ ನಡವಳಿಗಳು ಸಾರ್ವಜನಿಕ ಕೌಐರಿಗಳ ಕಟ್ಟಡ ನ್ಯೂ ಸಯ್ಯಾಜಿರಾವ್ ರಸ್ತೆ, ಮೈಸೂರು-570 024 ಜೆಆರ್ಎಂ/ಎಸ್7/ ಸೌಸ/37/2012-13 ದಿ:18.02.2013ರಂದು ನೀಡಿರುವ ಉದ್ದೇಶಿತ ಗ್ರೀನ್ ಲೀವ್ಸ್ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಮಂಡ್ಯ ಇದಕ್ಕೆ ಪ್ರಾರಂಭಿಕ ಷೇರು ಸಂಗ್ರಹಣಾ ಅನುಮತಿ ಆದೇಶವನ್ನು ರದ್ದು ಗೊಳಿಸುವುದರಿಂದ ಮುಖ್ಯ ಪ್ರವರ್ತಕರು ಯಾರಿಂದಲೂ ಕೂಡ ಷೇರು ಸಂಗ್ರಹಣೆ ಮಾಡಬಾರದೆಂದು ಆದೇಶಿಸಿದೆ.

ಹಣವನ್ನು ಗೊಬ್ಬರವನ್ನಾಗಿ ಮಾಡಬೇಕೇ ಹೊರತು, ತಿಪ್ಪೆಯನ್ನಲ್ಲ – ಎಂ.ವಿ.ಮೋಹನ್

ಶ್ರಮದಿಂದ ಗಳಿಸಬೇಕು, ಜಾಗೃತಿಯಿಂದ ಉಳಿಸಬೇಕು, ನೀತಿಯುತ ಬಳಕೆ ಆಗಬೇಕು, ಯುಕ್ತಿಯಿಂದ ಬೆಳೆಸಬೇಕು. ಆಗ ಮಾತ್ರ ಸಂಪತ್ತಿನ ಸದುಪಯೋಗ ಆಗಿ ಬಾಳಿನಲ್ಲಿ ನೆಮ್ಮದಿ ಸಿಗುವುದು ಎಂದು ಮಯೂರ ಸೌಹಾರ್ದ ಸಹಕಾರಿಯ ಅಧ್ಯಕ್ಷ ಶ್ರೀ ಎಂ.ಎಸ್. ವೆಂಕಟೇಶ್ ಕೌಟಿಲ್ಯನ ಅರ್ಥ ನೀತಿಯ ಪ್ರಕಾರ ಸಂಪತ್ತಿನ ನಾಲ್ಕು ಆಧಾರ ಸ್ತಂಭಗಳ ಪರಿಚಯ ಮಾಡಿಕೊಟ್ಟರು.

ಶಿವಮೊಗ್ಗ ಮಥುರಾ ಪ್ಯಾರಡೈಸ್‌ನಲ್ಲಿ ಮಯೂರ ಸೌಹಾರ್ದ ಸಹಕಾರಿಯ ದಶಮಾನೋತ್ಸವದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ದಶಮಾನೋತ್ಸವದ ನಿಮಿತ್ತ ಆಯೋಜಿಸಿದ "ಸಹಕಾರ ಚಿಂತನ" ಕಾರ್ಯಕ್ರಮವನ್ನು ಲೆಕ್ಕಪರಿಶೋದಕರಾದ ಶ್ರೀ ಬಿ.ವಿ.ರವೀಂದ್ರನಾಥ್ ಸಂಪನ್ಮೂಲ ವ್ಯಕ್ತಿಯಾಗಿ ಪರಿಣಾಮಕಾರಿಯಾಗಿ ನಡೆಸಿಕೊಟ್ಟರು.

"ಗ್ರಾಹಕರ ಆರ್ಥಿಕ ಸವಾಲುಗಳು – ಅವಕಾಶಗಳು" ವಿಷಯವನ್ನು ಎಲ್ಲರ ಮನಮುಟ್ಟುವಂತೆ ತಿಳಿಸಿದರು. ಮಧ್ಯಮ ವರ್ಗದ ಜನಗಳ ಆರ್ಥಿಕ ಸವಾಲುಗಳು, ಬದುಕಲು ಬೇಕಾದ ದಾರಿಗಳು, ದುಡಿಮೆಯ ರೀತಿ ನೀತಿಗಳು, ಶ್ರೀಮಂತಿಕೆ, ಐಶ್ವರ್ಯವಂತಿಕೆ, ಕುಟುಂಬದ ಹೊಣೆಗಾರಿಕೆ, ಮಕ್ಕಳ ಪೋಷಣೆ,

ಆದಾಯದ ನಿರ್ವಹಣೆ, ಸಂಪಾದನೆಯ ಹೂಡಿಕೆ ಹಾಗೂ ಜೀವನದ ಸಾರ್ಥಕತೆ ಬಗ್ಗೆ ವಿಶ್ಲೇಷಣೆ ನೀಡಿದರು. ಮನುಷ್ಯನು ಮೂರು ರೀತಿಯ ಯೋಗಿ ಆಗಬೇಕಾಗಿದೆ – (1) ಉದ್ಯೋಗಿ (2) ಉಪಯೋಗಿ (3) ಸಹಯೋಗಿ. ನಮ್ಮ ಸಾಮರ್ಥ್ಯವನ್ನು ಗುರುತಿಸಿಕೊಂಡು, ಉಪಯೋಗಿಸಿ, ಬೆಳೆಸಿದಾಗ ಒಬ್ಬ ಸಾಧಕನಾಗ ಬಹುದೆಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಸಾಗರದ ಎಂ.ಡಿ.ಎಫ್., ಕಾರ್ಯದರ್ಶಿ ಶ್ರೀ ಎಂ.ವಿ.ಮೋಹನ್ ಮಾತನಾಡಿ ಹಣ ಕಾಸಿನ ಬಲದ ಜೊತೆಗೆ ಆರ್ಥಿಕ ಶಿಸ್ತು ಪ್ರತಿಯೊಬ್ಬ ಮನುಷ್ಯನಿಗೆ ಅನಿವಾರ್ಯ ಎಂದು ತಿಳಿಸಿದರು. "ಹಣಕಾಸಿನ ಸಾಕ್ಷರತೆ" ಬಗ್ಗೆ ಮಾಡನಾಡುತ್ತಾ ನಮ್ಮ ಸಾಮಾಜಿಕ ಸುಭದ್ರತೆಗೆ ನಾವೇ ಹೊಣೆಯಾಗಬೇಕು. ಅದಕ್ಕಾಗಿ ನಮ್ಮ ಆದಾಯದ ಮೂರನೇ ಒಂದು ಭಾಗ ಉಳಿಸಬೇಕು. ಜಗತ್ತೇ ಆರ್ಥಿಕ ಹಿನ್ನಡೆಯಲ್ಲಿರುವಾಗ ನಮ್ಮ ಉಳಿತಾಯ ಮನೋಭಾವವೇ ನಮ್ಮ ದೇಶದ ಆಸ್ತಿ ಆಗಿದೆ ಎಂದರು.

ಶ್ರೀ ಪ್ರತಾಪಶಾಸ್ತ್ರಿಯಿಂದ ಪ್ರಾರ್ಥನೆ, ಶ್ರೀ ರೋಹಿಣಿ ಪುರುಷೋತ್ತಮ್ ಇವರಿಂದ ಗೀತೆ, ಶ್ರೀಮತಿ ಇಂದಿರಾ ದೇವೇಂದ್ರ ಇವರಿಂದ ಸ್ವಾಗತ, ಪ್ರಸ್ತಾವನೆ ಭಾಷಣವನ್ನು ಶ್ರೀ ಎಂ.ಬಿ.ಸುರೇಶ್, ಮಯೂರ ಸೌಹಾರ್ದ ನಡೆದು ಬಂದ ದಾರಿಯನ್ನು ಸಿ.ಇ.ಓ. ಶ್ರೀ ಶೀನಿವಾಸಮೂರ್ತಿ ಎಂ.ಎನ್., ಶಿವಮೊಗ್ಗ ಶಾಖಾವರದಿಯನ್ನು ವ್ಯವಸ್ಥಾಪಕರಾದ ಶ್ರೀ ಬಿ.ರಂಗನಾಥ, ವದನಾರ್ಪಣೆಯನ್ನು ಶ್ರೀ ಎನ್.ಅಶ್ವತ್ಥರಾವ್ ನಡೆಸಿಕೊಟ್ಟರು.

ನೂತನ ಶಾಖೆಯ ಉದ್ಘಾಟನೆ

ಚಿತ್ರದುರ್ಗ ಜಿಲ್ಲಾ ಹೊಸದುರ್ಗದಲ್ಲಿ ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಭದ್ರಾವತಿ ನಗರದಲ್ಲಿ ನೂತನ ಶಾಖೆಯನ್ನು ನಗರದ ಚನ್ನಗಿರಿ ರಸ್ತೆಯಲ್ಲಿನ ಜ್ಯೋತಿದಂತ ಚಿಕಿತ್ಸಾಲಯದ ಮೇಲಂತಸ್ತಿನ ಸುಸಜ್ಜಿತ ಕಟ್ಟಡದಲ್ಲಿ ನೂತನ ಶಾಖೆ ಉದ್ಘಾಟನೆ ಸಮಾರಂಭ ಇತ್ತೀಚೆಗೆ ಜರುಗಿತು.

ನೂತನ ಶಾಖೆ ಉದ್ಘಾಟನೆ ಹಾಗೂ ಬ್ಯಾಂಕಿನ ಸಂಸ್ಥಾಪಕರುಗಳ ಭಾವಚಿತ್ರ ಅನಾವರಣವನ್ನು ಶ್ರೀಶೈಲಾ ಜಗದ್ಗುರು ಡಾ॥ ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಚಾರ್ಯ ಮಹಾಸ್ವಾಮಿಳೂ ನೆರವೇರಿಸಿದರು.

ಜ್ಯೋತಿ ಬೆಳಗಿಸುವ ಕಾರ್ಯಕ್ರಮವು ಪರಮಪೂಜ್ಯ ಷ.ಬ್ರ.ಶ್ರೀ ಶಿವಾನಂದ ಶಿವಾಚಾರ್ಯ ಮಹಾಸ್ವಾಮಿ,ಶ್ರೀ ಶೈಲ ಶಾಖಾ ಮಠ, ಹಣ್ಣೆ ಇವರುಗಳಿಂದ ನೆರವೇರಿತು. ಹಾಗೂ ಬಿಳಕಿ ಹಿರೇಮಠ ಪರಮಪೂಜ್ಯ ಷ.ಬ್ರ.ಶ್ರೀ ರಾಚೋಟೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳವರು ಉಪಸ್ಥಿತಿಯಲ್ಲಿದ್ದು, ಬ್ಯಾಂಕಿನ ಅಧ್ಯಕ್ಷರಾದ ಶ್ರೀಯುತ ಹಂಜಿ ಶಿವಸ್ವಾಮಿ ಇವರ ಅಧ್ಯಕ್ಷತೆಯಲ್ಲಿ ಸಮಾರಂಭ ನಡೆದಿದ್ದು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಅಧ್ಯಕ್ಷರದ ಶ್ರೀಯುತ ಎಸ್.ಆರ್.ಸತೀಶ್ಚಂದ್ರ ಅವರಿಂದ ಭದ್ರತಾ ಕೊಠಡಿಯ ಉದ್ಘಾಟನೆ ನರವೇರಲ್ಪಟ್ಟಿತು.

ಭದ್ರಾವತಿ ವಿಧಾನ ಸಭಾ ಕ್ಷೇತ್ರದ ಶಾಸಕರಾದ ಶ್ರೀ ಬಿ.ಕೆ.ಸಂಗಮೇಶ್ ರವರಿಂದ ಕೌಟರ್ ಉದ್ಘಾಟನೆ ನೆರವೇರಲ್ಪಟ್ಟಿತು ಮತ್ತು ಬ್ಯಾಂಕಿನ ಠೇವಣಿ ರಸೀದಿ ವಿತರಣೆ ಕಾರ್ಯಕ್ರಮವು ನಗರಭಾಧ್ಯಕ್ಷರಾದ ಬಿ.ಕೆ. ಮೋಹನ್‌ರವರಿಂದ ನೆರವೇರಿಲ್ಪಟ್ಟು ಹಾಗೂ ಶಿವಮೊಗ್ಗ ಜಿಲ್ಲಾ ಸಹಕಾರ ಸಮುಘಗಳ ಉಪನಿಬಂಕರಾದ ಶ್ರೀ ಅಶೋಕ್ ಎಂ.ಮೊರಬರವರು ಸಮಾರಂಭದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ರಾಜ್ಯದ ಪಟ್ಟಣ ಬ್ಯಾಂಕುಗಳ ಮಹಾಮಂಡಳ

http://www.kubfed.com

■ ರಘುನಂದನ ಕೆ.
ಸಹಪ್ರಧಾನ ವ್ಯವಸ್ಥಾಪಕ,
ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

http://www.kubfed.com

ದೇಶದ ಹಣಕಾಸು ಕ್ಷೇತ್ರದಲ್ಲಿ ಬ್ಯಾಂಕುಗಳ ಪಾತ್ರ ಬಹಳ ಮಹತ್ವವಾದದ್ದು. ಬ್ಯಾಂಕಿಂಗ್ ಕ್ಷೇತ್ರದ ಬದಲಾವಣೆಗಳು ಹಣಕಾಸು ಕ್ಷೇತ್ರವನ್ನು ಗಾಢವಾಗಿ ಪ್ರಭಾವಿಸುತ್ತವೆ. ದೇಶದಲ್ಲಿನ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಪಾತ್ರ ಮಹತ್ವವಾದದ್ದು. ಭಾರತದ ಬ್ಯಾಂಕಿಂಗ್ ಕ್ಷೇತ್ರದದಲ್ಲಿ 31 ಮಾರ್ಚ್ 2011ಕ್ಕೆ 1645 ಪಟ್ಟಣ ಸಹಕಾರ ಬ್ಯಾಂಕುಗಳು ಕಾರ್ಯನಿರ್ವಹಿಸುತ್ತಿವೆ. ಅದರಲ್ಲೂ ಮುಖ್ಯವಾಗಿ ಕರ್ನಾಟಕ, ಮಹಾರಾಷ್ಟ್ರ, ಗುಜರಾತ್, ಆಂದ್ರ ಪ್ರದೇಶ ಮತ್ತು ತಮಿಳು ನಾಡು ಈ 5 ರಾಜ್ಯಗಳಲ್ಲಿ ಶೇ.80ರಷ್ಟು ಅರ್ಬನ್ ಬ್ಯಾಂಕುಗಳು ಕೇಂದ್ರೀಕೃತವಾಗಿವೆ. ಅರ್ಬನ್ ಬ್ಯಾಂಕುಗಳ ವೈಶಿಷ್ಟ್ಯವೆಂದರೆ ಇವು ಹೊಂದಿರುವ ದ್ವಿಮುಖ ಆಡಳಿತ ಪದ್ಧತಿ. ಅಂದರೆ ಏಕಕಾಲದಲ್ಲಿ ಇವು ರಾಜ್ಯದಲ್ಲಿ ಜಾರಿಯಲ್ಲಿರುವ ಸಹಕಾರ ಕಾಯ್ದೆಯಲ್ಲಿ ನೋಂದಣಿಯಾಗಿ ಸಹಕಾರ ಸಂಸ್ಥೆಯಂತೆಯೂ ಹಾಗೂ ಆರ್‌ಬಿಐನಿಂದ ನಿಯಂತ್ರಿಸಲ್ಪಡುವ ಬ್ಯಾಂಕುಗಳಾಗಿಯೂ ಕಾರ್ಯನಿರ್ವಹಿಸುತ್ತವೆ.

ಕರ್ನಾಟಕ ರಾಜ್ಯದಲ್ಲಿ ಎರಡು ಸಹಕಾರ ಕಾಯ್ದೆಗಳು ಜಾರಿಯಲ್ಲಿದ್ದು ಇವುಗಳಡಿಯಲ್ಲಿ 268 ಅರ್ಬನ್ ಬ್ಯಾಂಕುಗಳು ಕಾರ್ಯನಿರ್ವಹಿಸುತ್ತಿವೆ. ಈ ಅರ್ಬನ್ ಬ್ಯಾಂಕುಗಳನ್ನು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಪ್ರಬಲ ಶಕ್ತಿಶಾಲಿ ಸಂಸ್ಥೆಗಳನ್ನಾಗಿ ರೂಪಿಸುವ, ವೃತ್ತಿಪರತೆಯನ್ನು ಪರಿಣಾಮಕಾರಿಯಾಗಿ ಜಾರಿ ತರುವ ಆಶಯದೊಂದಿಗೆ ರಾಜ್ಯಮಟ್ಟದ ಸಂಸ್ಥೆಯಾಗಿ ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ಕಾರ್ಯನಿರ್ವಹಿಸುತ್ತಿದೆ. ಇದರ ಕೇಂದ್ರ ಕಛೇರಿ ಬೆಂಗಳೂರಿನಲ್ಲಿದ್ದು ಶ್ರೀಯುತ ಹೆಚ್ ಕೆ ಪಾಟೀಲ್ ಇದರ ಅಧ್ಯಕ್ಷರಾಗಿರುತ್ತಾರೆ. ಈ ಸಂಸ್ಥೆಯ ವೆಬ್‌ತಾಣದ ಪರಿಚಯ ಇಲ್ಲಿದೆ.

ವೆಬ್‌ತಾಣ 09 : http://www.kubfed.com

- ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ಇದರ ಗುರಿ ಮತ್ತು ಉದ್ದೇಶಗಳು, ಆಡಳಿತ ಮಂಡಳಿ ಹಾಗೂ ಪದಾಧಿಕಾರಿಗಳ ವಿವರ, ಕಾರ್ಯಚಟುವಟಿಕೆಗಳು, ಕಛೇರಿ ಅಧಿಕಾರಿಗಳ ಮಾಹಿತಿ, ಬೆಂಗಳೂರಿನಲ್ಲಿರುವ ಕೇಂದ್ರ ಕಛೇರಿ ಹಾಗೂ ಹುಬ್ಬಳ್ಳಿಯಲ್ಲಿರುವ ಪ್ರಾದೇಶಿಕ ಕಛೇರಿಯ ಸಂಪರ್ಕ ಮಾಹಿತಿಯನ್ನು ಈ ವೆಬ್‌ತಾಣದಲ್ಲಿ ಪಡೆಯಬಹುದು.
- ಕರ್ನಾಟಕ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಪಟ್ಟಣ ಸಹಕಾರ ಬ್ಯಾಂಕುಗಳ ಜಿಲ್ಲಾವಾರು ಮಾಹಿತಿ ಪಟ್ಟಿ, ದೇಶದ ಹಾಗೂ ರಾಜ್ಯದ ಪಟ್ಟಣ ಸಹಕಾರು ಬ್ಯಾಂಕುಗಳ ಅಂಕಿ ಅಂಶಗಳ ವಿವರವನ್ನು ಈ ವೆಬ್‌ತಾಣದ ಮೂಲಕ ತಿಳಿದುಕೊಳ್ಳಬಹುದು.
- ಪಟ್ಟಣ ಸಹಕಾರ ಬ್ಯಾಂಕುಗಳು ನಿರ್ವಹಿಸುತ್ತಿರುವ ಇ ಸ್ಟಾಂಪಿಂಗ್ ಕೇಂದ್ರಗಳ ಸಂಪರ್ಕ ಮಾಹಿತಿಯನ್ನೊಳಗೊಂಡ ಜಿಲ್ಲಾವಾರು ಪಟ್ಟಿಯನ್ನು ಈ ವೆಬ್‌ತಾಣದಲ್ಲಿ ನೋಡಬಹುದು.

- ಕೋರ್ ಬ್ಯಾಂಕಿಂಗ್ ಒಪ್ಪಂದದ ವಿವರ, ವಿಮೆಗೆ ಸಂಬಂಧಿಸಿದ ಒಪ್ಪಂದದ ವಿವರ, ವಿವಿಧ ವಿಷಯಗಳಿಗೆ ಸಂಬಂಧಿಸಿದ ಕಾನೂನು ಸಲಹೆಗಳ ಮಾಹಿತಿಯನ್ನು ಈ ವೆಬ್‌ತಾಣದಲ್ಲಿ ಪಡೆಯಬಹುದು.
- ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಸಂಬಂಧಿಸಿದ ವಿವಿಧ ಕಾಯ್ದೆ ಹಾಗೂ ನಿಯಮಗಳನ್ನು ಈ ತಾಣದಿಂದ ಪಡೆಯಬಹುದು, ಅಲ್ಲದೆ ಈ ಸಂಸ್ಥೆಯು ಪ್ರಕಟಿಸುತ್ತಿರುವ ವಾರ ಪತ್ರಿಕೆ ಹಾಗೂ ಮಾಸ ಪತ್ರಿಕೆಯನ್ನು ಕೂಡ ನೋಡಬಹುದು.
- ಆರ್‌ಬಿಐ ನೀಡಿರುವ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಸಂಬಂಧಿಸಿದ ಸುತ್ತೋಲೆಗಳು, ಸರ್ಕಾರ ಹಾಗೂ ವಿವಿಧ ಇಲಾಖೆಗಳು ಪಟ್ಟಣ ಸಹಕಾರ ಬ್ಯಾಂಕುಗಳ ಕುರಿತಂತೆ ಹೊರಡಿಸಿರುವ ಸುತ್ತೋಲೆಗಳನ್ನು ಈ ತಾಣದಿಂದ ಪಡೆಯಬಹುದು.
- ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದಿಂದ ಆಯೋಜಿಸಲ್ಪಡುವ ತರಬೇತಿ ಕಾರ್ಯಕ್ರಮಗಳು, ವಿಚಾರ ಗೋಷ್ಠಿಗಳು ಹಾಗೂ ಅಧ್ಯಯನ ಪ್ರವಾಸಗಳ ವಿವರಗಳನ್ನು ಹಾಗೂ ಸಂಬಂಧಿಸಿದ ಕಾರ್ಯಕ್ರಮಗಳ ಚಿತ್ರಗಳನ್ನು ಈ ವೆಬ್‌ತಾಣದಲ್ಲಿ ನೋಡಬಹುದು.

ಪಟ್ಟಣ ಸಹಕಾರ ಬ್ಯಾಂಕುಗಳ ಕ್ಷೇತ್ರದಲ್ಲಿ ದ್ವಿತೀಯ ಸ್ಥಾನದಲ್ಲಿರುವ ಅಂದರೆ ಮಹಾರಾಷ್ಟ್ರದ ನಂತರದ ಸ್ಥಾನದಲ್ಲಿರುವ ಕರ್ನಾಟಕ ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಸಾಧನೆಯನ್ನು ರಾಷ್ಟ್ರಮಟ್ಟದಲ್ಲಿ ಪ್ರಚುರಪಡಿಸುವ ಹಾಗೂ ಮಾಹಿತಿ ತಂತ್ರಜ್ಞಾನದ ಮೂಲಕ ವೆಬ್‌ತಾಣದಲ್ಲಿ ಒದಗಿಸುವ ಕಾರ್ಯವನ್ನು ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ಮಾಡಬೇಕಿದೆ. ವೃತ್ತಿಪರತೆಯನ್ನು ಪರಿಣಾಮಕಾರಿಯಾಗಿ ಜಾರಿ ತರುವ ನಿಟ್ಟಿನಲ್ಲಿ ಪ್ರಯತ್ನಿಸುತ್ತಿರುವ ಈ ಸಂಸ್ಥೆ ತನ್ನ ವೆಬ್‌ತಾಣವನ್ನು ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಅತೀ ಅಗತ್ಯವೆನಿಸುವ ಇತ್ತೀಚಿನ ಬ್ಯಾಂಕಿಂಗ್ ಕ್ಷೇತ್ರದ ವಿಷಯಗಳನ್ನೂ ಸೇರಿದಂತೆ ಇನ್ನಷ್ಟು ಮಾಹಿತಿಪೂರ್ಣವಾಗಿಸಿದಲ್ಲಿ ಹೆಚ್ಚು ಪ್ರಯೋಜನಕಾರಿಯಾಗಲಿದೆ. ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಕುರಿತು ಮಾಹಿತಿಗಾಗಿ ಈ ವೆಬ್‌ತಾಣವನ್ನು ಸಂದರ್ಶಿಸಬಹುದಾಗಿದೆ.

ಸಹಕಾರಿ ನಿಬಂಧಕ ಶ್ರೀ ಎಸ್.ಜಿ.ಹೆಗಡೆಯವರಿಗೆ ಹೃದಯಸ್ಪರ್ಶಿ ಬೀಳ್ಕೊಡುಗೆ

ಸಹಕಾರಿ ಸಂಘಗಳ ನಿಬಂಧಕ ಶ್ರೀ ಎಸ್.ಜಿ.ಹೆಗಡೆಯವರು ದಿನಾಂಕ 28–2–2013ರಂದು ವಯೋನಿವೃತ್ತಿ ಪ್ರಯುಕ್ತ ಪತ್ರಾಂಕಿತ ಅಧಿಕಾರಿಗಳ ಸಂಘದ ವತಿಯಿಂದ ಶ್ರೀಯುತರಿಗೆ ಬೀಳ್ಕೊಡುವ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಇದೇ ಸಮಾರಂಭದಲ್ಲಿ ಸಹಕಾರಿ ಇಲಾಖೆಯ ಸೇವೆಯಿಂದ ನಿವೃತ್ತಿ ಹೊಂದಿದ ಅಪರ ನಿಬಂಧಕರುಗಳಾದ ಶ್ರೀ ವೀರಭದ್ರಸ್ವಾಮಿ, ಶ್ರೀ ಮೇಟಿ, ಶ್ರೀ ವಿಜಯಕುಮಾರ ಕುಲಕರ್ಣಿ ಶ್ರೀ ಮೊಹಮ್ಮದ ಸಮೀಉಲ್ಲಾ, ಶ್ರೀ ಲಿಂಗರಾಜ ಸಹಾಯಕ ನಿಬಂಧಕರಾದ ಶ್ರೀ ಬಾಲಕೃಷ್ಣರಾವ, ಶ್ರೀ ವೀರಣ್ಣ ಇವರುಗಳಿಗೂ ಬಿಳ್ಕೊಡುಗೆ ಸಮಾರಂಭವನ್ನು ಎರ್ಪಡಿಸಲಾಗಿತ್ತು. ಸಮಾರಂಭದ ಅಧ್ಯಕ್ಷತೆಯನ್ನು ಅಪರ ನಿಬಂಧಕ ಹಾಗೂ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕ ಶ್ರೀ ಜೆಚ್.ಜಯದೇವ ರವರು ವಹಿಸಿದ್ದರು. ಉಪಾಧ್ಯಕ್ಷ ಶ್ರೀ ಹೆಚ್.ಎಸ್.ನಾಗರಾಜಯ್ಯನವರು ಎಲ್ಲರನ್ನು ಸ್ವಾಗತಿಸಿದರು. ಸಮಾರಂಭದಲ್ಲಿ ಲೆಕ್ಕಪರಿಶೋಧನಾ ನಿರ್ದೇಶಕ ಶ್ರೀ ಕರಿಬಸಪ್ಪ ವಿಶೇಷ ಕರ್ತವ್ಯಾಧಿಕಾರಿ ಶ್ರೀ ರಮಣರೆಡ್ಡಿ, ಅಪರನಿಬಂಧಕರುಗಳಾದ ಶ್ರೀ ಮಂಜಪ್ಪ ಶ್ರೀ ಎಮ್.ಜಿ.ಪಾಟೀಲ,ಶ್ರೀ ತಿಮ್ಮಯ್ಯ,ಶ್ರೀ ನಾರಾಯಣಪ್ಪ, ಶ್ರೀ ಯದುನಾಥ ಶ್ರೀ ಮಧುಸೂಧನರವರಲ್ಲದೇ ಅನೇಕ ಹಿರಿಯ ಅಧಿಕಾರಿಗಳು, ಹಾಗೂ ಸಿಬ್ಬಂದಿಯವರು ಮತ್ತು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲ್ ಸೇರಿದಂತೆ ಅನೇಕ ಸಂಸ್ಥೆಗಳ ಅಧಿಕಾರಿಗಳು ಭಾಗವಹಿಸಿದ್ದರು.

ಸರಕಾರಿ ಸೇವಾ ಅವಧಿಯಲ್ಲಿ ಮಾನವೀಯತೆಯಿರಲಿ : ಅಧಿಕಾರಿಗಳಿಗೆ ಶ್ರೀ ಎಸ್.ಜಿ. ಹೆಗಡೆ ಕಿವಿಮಾತು

ಅಭಿನಂದನೆಯನ್ನು ಸ್ವೀಕರಿಸಿ ಮಾತನಾಡಿದ ಶ್ರೀ ಎಸ್.ಜಿ. ಹೆಗಡೆಯವರು ಸರಕಾರಿ ಕೆಲಸದ ಅವಧಿಯಲ್ಲಿ ಅಧಿಕಾರಿಗಳು ಸಾರ್ವಜನಿಕರೊಡನೆ ಮಾನವೀಯತೆಯಿಂದ ಸೌಜನ್ಯತೆಯಿಂದ ವರ್ತಿಸಬೇಕು. ಅಂತರಿಕ ಸಂಬಂದಗಳನ್ನು ಹೆಚ್ಚಿಸಿಕೊಳ್ಳಬೇಕು. ಉತ್ತಮ ಡ್ರೆಸ್ಕೋಟ್ ಶಿಸ್ತು ಮತ್ತು ದಕ್ಷತೆಗೆ ಹೆಚ್ಚಿನ ಪ್ರಾಶಸ್ತ್ಯವಿರಬೇಕು. ಸಮಯ ಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕು. ಉತ್ತಮ ಸೌಹಾರ್ದಯುತ ನಡುವಳಿಕೆಯನ್ನು ರೂಢಿಸಿಕೊಳ್ಳಬೇಕು ಇವುಗಳನ್ನೆ ನನ್ನ 36 ವರ್ಷಗಳ ಸೇವಾವಧಿಯಲ್ಲಿ ರೂಢಿಸಿಕೊಂಡಿದ್ದೆ. ನನ್ನ ಯಶಸ್ವಿ ಸೇವೆಯ ಗುಟ್ಟು. ಆರೋಗ್ಯಕ್ಕೆ ಹೆಚ್ಚಿನ ಮಹತ್ವವಿರಬೇಕು. ಯಾವುದೇ ಸರಕಾರಿ ಸೇವೆ ಯಾರೊಬ್ಬರಿಂದಲೇ ಆಗುವಂತಹದ್ದಲ್ಲ. ಅನಾವಶ್ಯಕವಾಗಿ ತಲೆಕೆಡಿಸಿಕೊಂಡು ಕಚೇರಿಯಲ್ಲಿ ಹೆಚ್ಚಿನ ಸಮಯ ಕುಳಿತು ಕೆಲಸಮಾಡುವುದು ಆರೋಗ್ಯ ಕೆಡಿಸಿಕೊಳ್ಳುವುದು ಸರಿಯಲ್ಲ ಎಂದು ಯಾವುದೇ ಪ್ರಮುಖ ಹುದ್ದೆಯನ್ನು ಹುಡುಕಿಕೊಂಡು ಹೋಗುವ ಪದ್ಧತಿ ಸರಿಯಲ್ಲ ತಿಳಿಸಿದರು. ಅನೇಕ ಇಲಾಖೆಗಳಲ್ಲಿ ಸೇವೆ ಸಲ್ಲಿಸಿದ್ದೇನೆ. ಆದರೆ ಸಹಕಾರ ಇಲಾಖೆಯ ಸೇವೆ ನನಗೆ ತೃಪ್ತಿತಂದಿದೆ ಎಂದು ತಿಳಿಸಿದರು. ನನ್ನ ಆರೋಗ್ಯ ಉತ್ತಮವಾಗಿರುವುದಕ್ಕೆ, ನಾನು ಸಂತೃಪ್ತ ಸೇವೆ ಸಲ್ಲಿಸಲು ಸಾಧ್ಯವಾಗಲು ನನ್ನ ಕುಟುಂಬದವರು ಮುಖ್ಯಕಾರಣ ಎಂದು ಹೇಳಿದರು. ಸಂಯುಕ್ತ ಸಹಕಾರಿಯ ವತಿಯಿಂದಲೂ ಶ್ರೀಯುತ ಹೆಗಡೆಯವರಿಗೆ ಶುಭಕೋರಲಾಯಿತು.

ಅಭಿನಂದಿತರ ಪರವಾಗಿ ಶ್ರೀ ವೀರಭದ್ರ ಸ್ವಾಮಿಯವರು ಶ್ರೀ ಮೇಟಿಯವರು ಶ್ರೀ ಲಿಂಗರಾಜುರವರು ಮಾತನಾಡಿದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀ ಜಯ ದೇವರು ಇದೊಂದು ಹೃದಯಸ್ಪರ್ಶಿ ಹಾಗೂ ವೈಶಿಷ್ಠ ಪೂರ್ಣ ಸಮಾರಂಭವಾಗಿದೆ. ಇಂತಹ ಅನೇಕ ಸಮಾರಂಭಗಳಲ್ಲಿ ಭಾಗವಹಿಸುವ ಅವಕಾಶವಾಗಿತ್ತು ಆದರೆ ಇವತ್ತಿನ ಸಮಾರಂಭ ವಿಶೇಷವಾಗಿ ಶ್ರೀ ಎಸ್.ಜಿ.ಹೆಗಡೆಯವರ ಹಿತನುಡಿಗಳು ಸದಾ ನೆನಪಿನಲ್ಲಿಕೊಂಡು ಕಾರ್ಯರೂಪಕ್ಕೆ ಕೊಡುವಂತಹದ್ದಾಗಿವೆ. ಅಧಿಕಾರಿಗಳಿಗೆ ಆತ್ಮಾವಲೋಕನೆಗೆ ದಾರಿ ತೋರಿಸಿದೆ ಎಂದರು. ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ಮುಖ್ಯಮಂತ್ರಿ ಶ್ರೀ ಜಗದೀಶ ಶೆಟ್ಟರ್ ಅವರಿಂದ ಶಿವಾಜಿ ಕುರಿತ ಪುಸ್ತಕ ಬಿಡುಗಡೆ ಸಂದರ್ಭದಲ್ಲಿ ಸೌಹಾರ್ದ ಸಹಕಾರಿ ಅಧ್ಯಕ್ಷರಾದ ಶ್ರೀ ಎಸ್. ಆರ್. ಸತೀಶ್‌ಚಂದ್ರ, ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತೀಕರ್ ಹಾಗೂ ವ್ಯವಸ್ಥಾಪಕ ನಿರ್ದೇಶಕ ಶರಣಗೌಡ ಪಾಟೀಲ್ ಇತರ ಗಣ್ಯರು ಹಾಜರಿದ್ದರು.

ಸಹಕಾರಿ ರತ್ನ ಪುರಸ್ಕೃತ ಶ್ರೀ ವಿಶ್ವನಾಥ ಹಿರೇಮಠ ಇವರಿಗೆ ಮಹಿಳಾ ಪ್ರಗತಿ ಸ್ವಶಕ್ತ ಸ ಔಹಾರ್ದ ಸಹಕಾರಿ ನಿ., ಶ್ರೀ ಶಿವಲೀಲೆ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಶ್ರೀ ಸಾಯಿ ಕೀರ್ತನಾ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಶ್ರೀ ಪ್ರಶಾಂತ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಸೌಹಾರ್ದ ಸಹಕಾರಿಗಳಿಂದ ಸನ್ಮಾನ ಸಮಾರಂಭ.

ನೂತನ ದಂಪತಿಗಳಿಗೆ ಅಭಿನಂದನೆ

ಸಂಯುಕ್ತ ಸಹಕಾರಿಯ ಸಹಾಯಕ ವ್ಯವಸ್ಥಾಪಕ ಶ್ರೀ ಶ್ರೀಕಾಂತ ಬರುವೆ ಹಾಗೂ ಸಹಾಯಕ ಸಿಬ್ಬಂದಿ ಶ್ರೀ ಮಲ್ಲಿನಾಥರವರು ಇತ್ತೀಚೆಗೆ ವಿವಾಹವಾದರು ಅವರನ್ನು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಹಾಗೂ ಸಿಬ್ಬಂದಿಯವರ ಪರವಾಗಿ ಅಭಿನಂದಿಸಲಾಯಿತು.

ಮೊಬೈಲ್ ಬ್ಯಾಂಕಿಂಗ್ – ಅಂಗೈನಲ್ಲಿ ಬ್ಯಾಂಕಿಂಗ್ ಕ್ಷೇತ್ರ

- ಆರ್ನಂದನ್, ಯಲ್ಲಾಪುರ

ಬ್ಯಾಂಕಿಂಗ್ ಕ್ಷೇತ್ರ ಕಳೆದ ಎರಡು ದಶಕಗಳಲ್ಲಿ ಮಹತ್ವವೆನಿಸುವ ಬದಲಾವಣೆಗೆ ತೆರೆದುಕೊಂಡಿದೆ. ಗಂಟೆಗಟ್ಟಲೆ ಹಣ ಕಟ್ಟಲು ಹಾಗೂ ಹಣ ಪಡೆಯಲು ಸರತಿ ಸಾಲಿನಲ್ಲಿ ನಿಲ್ಲುವ ಕಾಲದಿಂದ ಬ್ಯಾಂಕಿಂಗ್ ಕ್ಷೇತ್ರ ಬಹುದೂರ ಸಾಗಿ ಬಂದಿದೆ. ಕ್ರೆಡಿಟ್ ಹಾಗೂ ಡೆಬಿಟ್ ಕಾರ್ಡುಗಳು ಬಂದ ನಂತರ ಕರೆನ್ಸಿ ಹಾಗೂ ನೋಟುಗಳ ಬಳಕೆ ಕಡಿಮೆಯಾಯಿತು. ಯಾವುದೇ ಶಾಖೆಯಿಂದ ಎಲ್ಲಿದ್ದರೂ ಬ್ಯಾಂಕ್ ವಹಿವಾಟು ನಡೆಸುವ ಕೋರ್ ಬ್ಯಾಂಕಿಂಗ್ ವ್ಯವಸ್ಥೆಯಿಂದ ಬ್ಯಾಂಕಿಂಗ್ ಕ್ಷೇತ್ರ ಹೊಸ ಮಜಲನ್ನು ತಲುಪಲು ಕಾರಣವಾಯಿತು. ಅಂತರ್ಜಾಲದ ಮೂಲಕ ಬ್ಯಾಂಕಿಂಗ್ ವ್ಯವಹಾರವನ್ನು ನಡೆಸುವ ಕಾಲದಿಂದಲೂ ಬ್ಯಾಂಕಿಂಗ್ ಕ್ಷೇತ್ರ ಈಗ ಮುನ್ನಡೆಯುತ್ತಿದೆ. ಇದಕ್ಕೆ ಕಾರಣವಾಗಿ ಪ್ರಸ್ತುತ ಈಗ "ಮೊಬೈಲ್ ಬ್ಯಾಂಕಿಂಗ್" ವ್ಯವಸ್ಥೆ ಬ್ಯಾಂಕಿಂಗ್ ಕ್ಷೇತ್ರವನ್ನು ಆವರಿಸುತ್ತಿದೆ.

ಬ್ಯಾಂಕಿಂಗ್ ಕ್ಷೇತ್ರದ ಬದಲಾವಣೆಗಳು ಗ್ರಾಮೀಣ ಪ್ರದೇಶದ ಜನತೆಗಿಂತ ಹೆಚ್ಚಾಗಿ ಕೇವಲ ನಗರಕ್ಕೆ, ಮಾಹಿತಿ ತಂತ್ರಜ್ಞಾನದ ಬಗ್ಗೆ ಅರಿವಿರುವ ಆಧುನಿಕ ಸಾಕ್ಷರರಿಗೆ ಹಾಗೂ ಸಂಸ್ಥೆಗಳಿಗೆ ಅನುಕೂಲ ಒದಗಿಸಿದ್ದೇ ಜಾಸ್ತಿ ಎನ್ನುವ ಅಭಿಪ್ರಾಯಗಳಿಗೆ ಉತ್ತರವಾಗಿ ಎಲ್ಲರ ಅಂಗೈಯನ್ನೂ ಮೊಬೈಲ್ ಮೂಲಕ ಬ್ಯಾಂಕಿಂಗ್ ಕ್ಷೇತ್ರ ತಲುಪಲಿದೆ ಎಂದು ಹಣಕಾಸು ತಜ್ಞರು ಅಭಿಪ್ರಾಯ ಪಡುತ್ತಿದ್ದಾರೆ. ಇದಕ್ಕೆ ಕಾರಣವೂ ಇದೆ, ಭಾರತ ವಿಶ್ವದ ಎರಡನೇ ಅತಿದೊಡ್ಡ ಮೊಬೈಲ್ ಮಾರುಕಟ್ಟೆಯಾಗಿರುವುದು, ಬ್ಯಾಂಕಿನ ಸುಧಾರಿತ ತಂತ್ರಜ್ಞಾನ ಹಾಗೂ 2005ರಿಂದ ಈಚೆಗೆ ಭಾರತೀಯರಲ್ಲಿ ಮೊಬೈಲ್ ಫೋನ್ ಬಳಕೆ 90 ಕೋಟಿಗಿಂತಲೂ ಹೆಚ್ಚಿರುವುದು. ಪ್ರತಿ ವ್ಯಕ್ತಿಯನ್ನೂ ಲೆಕ್ಕಕ್ಕೆ ತೆಗೆದುಕೊಂಡರೆ ಉಳಿತಾಯ ಮತ್ತು ಚಾಲ್ತಿ ಖಾತೆಯನ್ನು ಸೇರಿಸಿ ಕನಿಷ್ಠ 50 ಕೋಟಿ ಬ್ಯಾಂಕ್ ಖಾತೆಗಳಿರಬಹುದು. ಮೊಬೈಲ್ ಫೋನ್ ಮತ್ತು ಬ್ಯಾಂಕ್ ಖಾತೆ ಎರಡನ್ನೂ ಹೊಂದಿರುವವರು 25 ಕೋಟಿಗೂ ಅಧಿಕ ಮಂದಿ ಇರಬಹುದು ಎಂದು ಅಂದಾಜಿಸಲಾಗಿದೆ. ಹೀಗಿರುವಾಗ ಮೊಬೈಲ್ ಬ್ಯಾಂಕಿಂಗ್ ಸೇವೆಯನ್ನು ಏಕೆ ವಿಶಾಲ ವ್ಯಾಪ್ತಿಗೆ ತರಬಾರದು ಎಂಬ ಪ್ರಶ್ನೆಗೆ ಉತ್ತರವಾಗಿ ಈ ದಶಕದಲ್ಲಿಯಾದರೂ ಮೊಬೈಲ್ ಬ್ಯಾಂಕಿಂಗ್ ಸೇವೆಯನ್ನು ತಮ್ಮ ಖಾತೆದಾರರಿಗೆ ತಲುಪಿಸಬೇಕೆಂದು ವಾಣಿಜ್ಯ ಬ್ಯಾಂಕುಗಳು ಸಜ್ಜಾಗುತ್ತಿವೆ.

ಈಗ ಯಾವುದೇ ಮೊಬೈಲ್‌ನಿಂದಲೂ ಈ ವಹಿವಾಟು ನಿರ್ವಹಿಸಬಹುದು. ವಹಿವಾಟಿಗೆ ಅಗತ್ಯವಾಗಿ ಬೇಕಾಗಿರುವುದು ಬ್ಯಾಂಕಿನಲ್ಲಿ ಉಳಿತಾಯ ಅಥವಾ ಚಾಲ್ತಿ ಖಾತೆ ಹಾಗೂ ಏಳು ಸಂಖ್ಯೆಗಳ ಮೊಬೈಲ್ ಮನಿ ಐಡೆಂಟಿಫಯರ್ ನಂಬರ್ ಹೊಂದಿದ್ದರೆ ಯಾವ ಮೊಬೈಲ್‌ನಿಂದ ಬೇಕಾದರೂ ಬ್ಯಾಂಕಿಂಗ್ ಸೇವೆ ಪಡೆಯಬಹುದು.

ಮೊಬೈಲ್ ಬ್ಯಾಂಕಿಂಗ್ ಎಂದರೇನು? ಇದನ್ನು ಪಡೆಯುವುದು ಹೇಗೆ? – ಬ್ಯಾಂಕ್ ಗ್ರಾಹಕರು ತಮ್ಮ ಖಾತೆಯ ಮಾಹಿತಿಗಳನ್ನು, ಬಿಲ್ ಪಾವತಿ, ಹಣ ವರ್ಗಾವಣೆಯೂ ಸೇರಿದಂತೆ ಬ್ಯಾಂಕಿಂಗ್ ವ್ಯವಹಾರಗಳನ್ನು ತಮ್ಮಲ್ಲಿರುವ ಮೊಬೈಲ್ ಫೋನ್ ಮೂಲಕ ನಿರ್ವಹಿಸುವುದನ್ನು ಮೊಬೈಲ್ ಬ್ಯಾಂಕಿಂಗ್ ಎನ್ನಬಹುದು. ಆರಂಭದಲ್ಲಿ ಜಾವಾ/ಜಿಪಿಆರ್‌ಎಸ್ ಸೌಲಭ್ಯ ಇರುವ ಮೊಬೈಲ್‌ಗಳಲ್ಲಿ ಮಾತ್ರ ಈ ಸೌಲಭ್ಯ ಸಾಧ್ಯವಿತ್ತು, ಆದರೆ ಈಗ ಯಾವುದೇ ಮೊಬೈಲ್‌ನಿಂದಲೂ ಈ ವಹಿವಾಟು ನಿರ್ವಹಿಸಬಹುದು. ವಹಿವಾಟಿಗೆ ಅಗತ್ಯವಾಗಿ ಬೇಕಾಗಿರುವುದು ಬ್ಯಾಂಕಿನಲ್ಲಿ ಉಳಿತಾಯ ಅಥವಾ ಚಾಲ್ತಿ ಖಾತೆ ಹಾಗೂ ಏಳು ಸಂಖ್ಯೆಗಳ ಮೊಬೈಲ್ ಮನಿ ಐಡೆಂಟಿಫಯರ್ ನಂಬರ್ (ಎಂ.ಎಂ.ಐ.ಡಿ). ಇದನ್ನು ಹೊಂದಿದ್ದರೆ ಯಾವ ಮೊಬೈಲ್‌ನಿಂದ ಬೇಕಾದರೂ ಬ್ಯಾಂಕಿಂಗ್ ಸೇವೆಯನ್ನು ಪಡೆಯಬಹುದು.

ಭಾರತದಲ್ಲಿ ಮೊಬೈಲ್ ಬ್ಯಾಂಕಿಂಗ್‌ನ ಇತಿಹಾಸ : 2001ರಲ್ಲಿ ಭಾರತದಲ್ಲಿ ಮೊದಲ ಬಾರಿಗೆ ಮೊಬೈಲ್ ಮೂಲಕ ಬ್ಯಾಂಕಿಂಗ್ ವಹಿವಾಟಿನ ಮಾಹಿತಿ ನೀಡುವ ಎಸ್‌ಎಂಎಸ್ ಸೇವೆ ಆರಂಭವಾಯಿತು. 2008ರಲ್ಲಿ ರಿಸರ್ವ್ ಬ್ಯಾಂಕ್ ಮೊಬೈಲ್ ಬ್ಯಾಂಕಿನ ಪ್ರಸ್ತಾಪಕ್ಕೆ ತಾತ್ವಿಕವಾದ ಒಪ್ಪಿಗೆಯನ್ನು ನೀಡಿ ದಿನಕ್ಕೆ ರೂ.5000/-ದವರೆಗೂ ಹಣವನ್ನು ವರ್ಗಾಯಿಸಲು ಅನುಮೋದನೆ ನೀಡಿತು. 2009ರಲ್ಲಿ ಮೊಬೈಲ್ ಸೇವೆಯನ್ನು ಖರೀದಿ ಮತ್ತಿತರ ವಾಣಿಜ್ಯಿಕ ಬಳಕೆಗೂ ವಿಸ್ತರಿಸಲಾಯಿತು. 2010ರಲ್ಲಿ ಗ್ರಾಹಕರಿಂದ ಗ್ರಾಹಕರಿಗೆ ನಡೆಯುವ ಹಣ ವರ್ಗಾವಣೆಗೆ ಒಪ್ಪಿಗೆ ದೊರಕಿತು. 2011 ಮೊಬೈಲ್ ಮೂಲಕ ಪ್ರತಿನಿತ್ಯದ ವರ್ಗಾವಣೆಗೆ ಇದ್ದ ನಿಯಮಗಳನ್ನು ಸಡಿಲಗೊಳಿಸಲಾಯಿತು. ಇದರ ಪ್ರಕಾರವಾಗಿ ಸಾಮಾನ್ಯವಾಗಿ ಬಳಕೆಯಲ್ಲಿರುವ ಬೇಸಿಕ್ ಮೊಬೈಲ್‌ಗಳ ಮೂಲಕ ಕೂಡ ಹಣ ವರ್ಗಾವಣೆ ಮಾಡಬಹುದು, ಅಲ್ಲದೆ ಪ್ರತಿ ವರ್ಗಾವಣೆಗೆ ರೂ.10,000/-ಗಳನ್ನು ಮೀರದಂತೆ ತಿಂಗಳಿಗೆ ರೂ.25,000/-ದವರೆಗೆ ವರ್ಗಾವಣೆಗೆ ಅವಕಾಶ ಒದಗಿಸಲಾಗಿದೆ.

ವ್ಯವಹಾರ ಎಲ್ಲೆಲ್ಲಿ? : ಮಾರುಕಟ್ಟೆಯಲ್ಲಿ ತರಕಾರಿ ಖರೀದಿಸುತ್ತೀರಿ, ಹಣ ಪಾವತಿಸಬೇಕಿದೆ, ಪರ್ಸ್ ಮರೆತಿದ್ದೀರಿ, ಚಿಂತೆ ಮಾಡುವಂತಿಲ್ಲ, ನಿಮ್ಮಲ್ಲಿ ಮೊಬೈಲ್ ಫೋನ್ ಇದೆ. ತರಕಾರಿ ಮಾರಾಟಗಾರನೂ ಮೊಬೈಲ್ ಬ್ಯಾಂಕ್ ಸೇವೆ ಹೊಂದಿದ್ದಲ್ಲಿ, ನಿಮ್ಮ ಮೊಬೈಲ್ ಮೂಲಕ ಅವನ ಖಾತೆಗೆ ತಕ್ಷಣದಲ್ಲಿ ಹಣ ವರ್ಗಾಯಿಸಬಹುದು, ಪ್ರಕ್ರಿಯೆ ಪೂರ್ಣವಾದ ತಕ್ಷಣ ಸಂದೇಶವನ್ನ ಮೊಬೈಲ್‌ನಲ್ಲಿ ನೋಡಬಹುದು. ಇಂತಹ ಸಾಧ್ಯತೆಗಳಲ್ಲದೆ ಮೊಬೈಲ್ ಬ್ಯಾಂಕಿಂಗ್ ಸೇವೆಯನ್ನು, ಬ್ಯಾಂಕ್ ಖಾತೆಯಲ್ಲಿ – ತ್ವರಿತ ಹಣ ವರ್ಗಾವಣೆ, ಯಾವುದೇ ಸಮಯದಲ್ಲಿ



ಬ್ಯಾಲೆನ್ಸ ತಿಳಿದುಕೊಳ್ಳುವುದು, ಚೆಕ್ ಬುಕ್ ಪಡೆಯಲು ಕೋರಿಕೆ, ಚೆಕ್ ಸ್ಥಗಿತಗೊಳಿಸುವುದೂ ಸೇರಿದಂತೆ ಚೆಕ್ ಪಾವತಿಯ ಸ್ಥಿತಿಗತಿ ಇತ್ಯಾದಿ ವ್ಯವಹಾರಗಳನ್ನು ನಡೆಸಬಹುದು. ಸಾಲ ನೀಡಿಕೆಯಲ್ಲಿ – ಸಾಲದ ಬೇಡಿಕೆಯನ್ನು ಮೊಬೈಲ್ ಮೂಲಕವೇ ಸಲ್ಲಿಸಬಹುದು, ದೊರಕಬಹುದಾದ ಸಾಧ್ಯತೆಯನ್ನು ತಿಳಿದುಕೊಳ್ಳಬಹುದು, ಸಾಲದ ಬಾಕಿ, ಕಟ್ಟಬೇಕಿರುವ ಕಂತು, ಬೀಳುತ್ತಿರುವ ಬಡ್ಡಿ ಮೊದಲಾದವನ್ನು ತಿಳಿದುಕೊಳ್ಳಬಹುದು. ವಿದ್ಯುತ್, ನೀರು ಮೊದಲಾದ ಬಿಲ್ ಪವಾತಿ, ಬಸ್, ರೈಲು, ವಿಮಾನ, ಸಿನೆಮಾ ಟಿಕೇಟ್ ಬುಕಿಂಗ್, ವಿಮಾ ಕಂತು ಪಾವತಿ, ಫೋನ್ ರಿಚಾರ್ಜ್ ಸೇರಿದಂತೆ ಅನೇಕ ಪಾವತಿ ಕೇಂದ್ರಿತ ಕೆಲಸಗಳು ಮೊಬೈಲ್ ಬ್ಯಾಂಕಿಂಗ್‌ನಿಂದ ಸುಲಭವಾಗಲಿದೆ.

ಮೊಬೈಲ್ ಬ್ಯಾಂಕಿಂಗ್ ವ್ಯವಸ್ಥೆ ಜನಪ್ರಿಯವಾಗಲು ಹಲವು ಕಾರಣಗಳಿವೆ. ಇದು ವಿಶ್ವದ ಯಾವುದೇ ಭಾಗದಿಂದ ಬೇಕಾದರೂ ಬಳಸಬಹುದಾದ ವ್ಯವಸ್ಥೆ, ಇದರಲ್ಲಿ ಬ್ಯಾಂಕಿಂಗ್ ವೇಳೆಗೆ ಕಾಯುವಂತಿಲ್ಲ. ಇದು ಸುರಕ್ಷಿತ, ಸುಲಭ ಹಾಗೂ ಸರಳವೂ ಆಗಿದೆ. ಇದು ಸಾಂಪ್ರದಾಯಿಕ ಬ್ಯಾಂಕಿಂಗ್ ವ್ಯವಸ್ಥೆಗೆ ತಿರುವ ನೀಡುವ ಸಾಧ್ಯತೆಯನ್ನು ಅಲ್ಲಗೆಳೆಯುವಂತಿಲ್ಲ. ಪ್ರಸ್ತುತ ಭಾರತದಲ್ಲಿ ಎನ್.ಇ.ಎಫ್.ಟಿ ಬಹು ಜನಪ್ರಿಯವಾಗಿದೆ. ಇದಕ್ಕೆ ಹೋಲಿಸಿದರೆ ಮೊಬೈಲ್ ಬ್ಯಾಂಕಿಂಗ್ ಬಳಸುವ ಗ್ರಾಹಕರ ಸಂಖ್ಯೆ ಕಡಿಮೆ. ಪ್ರಸ್ತುತ ಭಾರತದಲ್ಲಿ 1.72 ಕೋಟಿ ಗ್ರಾಹಕರು ಮೊಬೈಲ್ ಮೂಲಕ ಬ್ಯಾಂಕಿಂಗ್ ಸೇವೆಯನ್ನು ಪಡೆಯತ್ತಿದ್ದಾರೆ. ಮೊಬೈಲ್ ಬ್ಯಾಂಕಿಂಗ್‌ನ ಉಪಯೋಗ ತಿಳಿದುಕೊಂಡರೆ, ಗ್ರಾಹಕರಿಗೆ ಸ್ಪಷ್ಟ ಮಾಹಿತಿ ದೊರೆತಲ್ಲಿ, ಮೊಬೈಲ್ ಬ್ಯಾಂಕಿಂಗ್ ವಹಿವಾಟುಗಳಿಂದ ಹೆಚ್ಚುವ ಒತ್ತಡವನ್ನು ದೂರಸಂಪರ್ಕ ಸೇವಾ ಸಂಸ್ಥೆಗಳು ಸಮರ್ಪಕವಾಗಿ ನಿಭಾಯಿಸಿದಲ್ಲಿ ಮೊಬೈಲ್ ಬ್ಯಾಂಕಿಂಗ್ ಯಶಸ್ವಿಯಾಗುವುದಲ್ಲದೇ, ಮುಂದಿನ ದಿನಗಳಲ್ಲಿ ಬ್ಯಾಂಕಿಂಗ್ ಕ್ಷೇತ್ರದ ಭವಿಷ್ಯವಾಗಲಿದೆ.

ಮಾಹಿತಿ ತಂತ್ರಜ್ಞಾನ ಎಲ್ಲ ಕಡೆ ಹೊಸತನಗಳನ್ನು ತರುತ್ತಿರುವಾಗ ಬ್ಯಾಂಕಿಂಗ್ ಕ್ಷೇತ್ರ ಅದಕ್ಕೆ ಹೊರತಾಗಿಲ್ಲ. ಗ್ರಾಹಕರನ್ನು ತಲುಪಲು, ಸೆಳೆಯಲು ಆಧುನಿಕ ತಂತ್ರಜ್ಞಾನಗಳ ಬಳಕೆ ಸೇವಾ ಕ್ಷೇತ್ರವನ್ನು ಸದಾ ಪ್ರಭಾವಿಸುತ್ತಲೇ ಬಂದಿದೆ. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪಟ್ಟಣ ಸಹಕಾರ ಬ್ಯಾಂಕುಗಳು ತಂತ್ರಜ್ಞಾನದ ಅರಿಯುವಿಕೆ ಹಾಗೂ ಅಳವಡಿಕೆಗಳಲ್ಲಿ ಪರಿಣಿತಿ ಹೊಂದಿದಾಗ ಮಾತ್ರ ವಾಣಿಜ್ಯ ಬ್ಯಾಂಕುಗಳ ಸ್ಫರ್ಧೆಯನ್ನು ಎದುರಿಸಲು ಸಾಧ್ಯವಾಗುತ್ತದೆ. ಮೊಬೈಲ್ ಬ್ಯಾಂಕಿಂಗ್ ಸೇವೆಯ ಮೂಲಕ ಈಗ ಬ್ಯಾಂಕಿಂಗ್ ಕ್ಷೇತ್ರ ಗ್ರಾಹಕರ ಅಂಗೈಗೆ ತಲಿಪಿದೆ. ಬ್ಯಾಂಕಿಂಗ್ ಕ್ಷೇತ್ರದ ಬದಲಾವಣೆಗಳನ್ನ ಗ್ರಾಹಕರೂ ಹಾಗೂ ಬ್ಯಾಂಕುಗಳೂ ಗುರುತಿಸಿ, ಅಳವಡಿಸಿಕೊಳ್ಳುವುದರ ಮೂಲಕ ಹಣಕಾಸು ವ್ಯವಹಾರವನ್ನು ಸರಳ ಹಾಗೂ ಸುಲಭವಾಗಿಸಿಕೊಳ್ಳಬಹುದಾಗಿದೆ. ■

ಸಿಂಧನೂರು ಸೌಹಾರ್ದ ಪತ್ತಿನ ಸಹಕಾರಿ ನಿ., ಸಿಂಧನೂರು, ಮಾನ್ವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಮಾನ್ವಿ ಮತ್ತು ವಿರೂಪಾಕ್ಷೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ., ಮಾನ್ವಿ ಇವುಗಳಿಗೆ ಕ.ರಾ.ಸೌ.ಸಂ.ಸ.ನಿ., ಅಧ್ಯಕ್ಷರಾದ ಶ್ರೀ ಎಸ್.ಆರ್. ಸತೀಶ್ಚಂದ್ರ, ಉಪಾಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತೀಕರ, ನಿರ್ದೇಶಕರಾದ ಶ್ರೀ ವೈ.ಟಿ. ಪಾಟೀಲ್ ಮತ್ತು ಗುಲಬರ್ಗಾ ವಿಭಾಗೀಯ ಅಧಿಕಾರಿಯಾದ ಶ್ರೀ ಸಂಜಯ ಕೋರಟಕರ ರವರು ಇತ್ತೀಚೆಗೆ ಭೇಟಿ ನೀಡಿದ್ದರು.

ಅಂತರರಾಷ್ಟ್ರೀಯ ಮಹಿಳಾ ವರ್ಷ : ಆಚರಣೆಗೆ ಶತಮಾನ; ಮಹಿಳೆಯರಿಗಿಲ್ಲ ಸಮಾಧಾನ

–ಸವಿತ ಎನ್ ಇ., ಕರಾಸೌಸಂಸನಿ ಬೆಂಗಳೂರು.

ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು ।
ಕಲ್ಲಾಗು ಕಷ್ಟಗಳ ವಿಧಿ ಮಳೆ ಸುರಿಯೆ॥
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ ।
ಎಲ್ಲರೊಳಗೊಂದಾಗು – ಮಂಕುತಿಮ್ಮ ॥

ಎಲ್ಲರೊಳಗೊಂದಾಗುವ ಮಹಿಳೆಯ ಬವಣೆಯ ಬದುಕು

ಅಂತರಾಷ್ಟ್ರೀಯ ಮಹಿಳಾ ದಿನ. ಹೆಣ್ಣು ಮಗಳ ಶಕ್ತಿ ಸಾಮರ್ಥ್ಯ, ತ್ಯಾಗ ಬಲಿದಾನಗಳ ಬಗ್ಗೆ ಹಾಡಿ ಹೊಗಳಲು ವಿಶೇಷ ದಿನ. ದಿನಗಳ ಆಚರಣೆ ಅರ್ಥಹೀನ. ನಾವು ಅದರ ಹಿಂದಿನ ಅರ್ಥ ಹುಡುಕಿ ಮಹಿಳೆಗಾಗಿ ಸಮಾನತೆಯ ಪ್ರಬಂಧ ಸೃಷ್ಟಿಸಲು ಅಸಮರ್ಥರಾದಾಗ. ಆಧುನಿಕ ಯುಗದಲ್ಲಿ ಮಹಿಳೆ ಬಹಳಷ್ಟನ್ನು ಸಾಧಿಸಿದ್ದರೂ ಪ್ರಪಂಚದ ಹಲವು ಭಾಗಗಳಲ್ಲಿ ಈಗಲೂ ಆಕೆ ಕಗ್ಗತ್ತಿನಲ್ಲಿ ತಡಕಾಡುತ್ತಿದ್ದಾಳೆ. ಬಿರುದು ಬಾವಲಿ, ಸನ್ಮಾನ ಸಂಪತ್ತಿಗಾಗಿ.ಮಹಿಳೆಯ ಹುಟ್ಟು ಈಗಲೂ ಕೆಲವು ಸಮಾಜಗಳಲ್ಲಿ ಅಸಮಾಧಾನ, ಅತೃಪ್ತಿ ತರುತ್ತದೆ. ಹೆಣ್ಣಿಗೆ ಭಾರತೀಯ ಸಮಾಜದಲ್ಲಿ ಅದೆಷ್ಟು ಗೌರವ,ಪೂಜನೀಯ ಸ್ಥಾನ,ಆಕೆ ಪ್ರೀತಿಯ ತಾಯಿ ಅಕ್ಕ,ತಂಗಿ,ಹೆಂಡತಿ ಹೀಗೆ ಎಲ್ಲ ಸ್ಥಾನವನ್ನೂ ಅಲಂಕರಿಸಿದ್ದಾಳೆ. ಆದರೆ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಇಂದಿಗೂ ಹೆಣು ್ಣಅನುಭವಿಸುತ್ತಿರುವ ಯಾತನೆ, ನೋವುಗಳು ದೌರ್ಜನ್ಯ ಇವುಗಳಿಗೆ ಪರಿಹಾರ ಪ್ರತಿ ವರ್ಷವು ನೆನಪಿಸಿಕೊಳ್ಳಬೇಕಾಗಿರುವ ಪ್ರಮುಖ ವಿಷಯ.

ಮಹಿಳಾ ದಿನಾಚರಣೆ ನೂರನೇ ವರ್ಷದ ಆಚರಣೆಯ ಸಂದರ್ಭದಲ್ಲಿ ಅಂತಾರಾಷ್ಟ್ರೀಯ ಮಹಿಳಾ ಸಂಘಟನೆಯು ಇದರ ಅಂಗವಾಗಿ “ಆರ್ಥಿಕ ಮತ್ತು ಲಿಂಗ ಸಮಾನತೆ–ಎಂಬ ಧ್ಯೇಯವಾಕ್ಯ ಘೋಷಿಸಿದೆ. ಆದರೆ ಶತಮಾನ ಕಳೆದರೂ ಇಂದಿಗೂ ಹಳ್ಳಿಗಳಲ್ಲಿ ದಿನವಿಡಿ ದುಡಿಯುವ ಮಹಿಳೆಯರ ಆರ್ಥಿಕ ಸ್ಥಿತಿ ಹಾಗೂ ಸಾಮಾಜಿಕ ಸುಧಾರಿಸಿಲ್ಲ ಎನ್ನುವುದು ನಮ್ಮ ಕಣ್ಣ ಮುಂದಿರುವ ಜ್ವಲಂತ ನಿದರ್ಶನ ಇದರ ನಡುವೆ ನೂರನೇ ವರ್ಷಾಚರಣೆ ವಿಪರ್ಯಾಸ ಅಲ್ಲವೇ?

ನಗರ ಜೀವನ ಶೈಲಿಯಿಂದ ಒಂದು ಕ್ಷಣ ಹೊರಗೆ ಬಂದು ಮಧ್ಯಮ ವರ್ಗದ ಹೆಣ್ಣುಮಕ್ಕಳ ಅಥವಾ ಗ್ರಾಮೀಣ ಹೆಣ್ಣು ಮಕ್ಕಳ ಬದುಕಿನ ಪುಟವನ್ನು ತಿರುವಿ ನೋಡಿದರೆ, ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಯಲ್ಲಿ ಹಿಂದುಳಿದಿರುವರೆಂದು ಗುರುತಿಸಬಹುದು.

ಗ್ರಾಮಗಳಲ್ಲಿ ನಗರ ಪ್ರದೇಶಗಳಿಲ್ಲಿ ಕೆಲಸ ಮಾಡುವ ಹೆಣ್ಣುಮಕ್ಕಳು ಮಾಡುವ ಕೆಲಸ ಹೆಚ್ಚು ನಿಖರ ಮತ್ತು ಅಚ್ಚುಕಟ್ಟಾಗಿರುತ್ತದೆ.ಹಿಗೆ ಎಷ್ಟೆ ಚುರಿಕಿನಿಂದ ಕೆಲಸ ಮಾಡಿದರು ಮಹಿಳೆಗೆ ಸಿಗುವ ವೇತನ ಕಡಿಮೆಯೇ ಅಲ್ಲವೇ?

ಪುರುಷರಿಗೆ ಸಮಾನವಾಗುವ ಕೆಲಸವನ್ನು ಮಹಿಳೆಯರು ನಿರ್ವಹಿಸುತ್ತ ಬಂದಿದ್ದರೂ ಮಹಿಳೆಯರಿಗೆ ನೀಡುವ ಕೂಲಿಯ ಪ್ರಮಾಣ ಕಡಿಮೆ ಈ ವ್ಯತ್ಯಾಸವನ್ನು ಸರಿಪಡಿಸುವುದಕ್ಕೆ ಗಮನ ಹರಿಸುವುದು ಇಂದಿನ ಅವಶ್ಯಕತೆ. ಇನ್ನು ಕೈಗಾರಿಕಾ ಕ್ಷೇತ್ರದತ್ತ ಗಮನ ಹರಿಸಿದರೆ ಮಹಿಳೆಯರು ಕೈಗಾರಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಗುಡಿಕೈಗಾರಿಕೆ ಯಾಗಿರಲಿ ಕಾರ್ಖಾನೆಯಾಗಿರಲಿ, ನೇಯ್ಗೆಯಲ್ಲಿಯಾಗಲಿ ಕಸೂತಿ ಕೆಲಸವಿರಲಿ ಅಥವಾ ಮನೆ ಕೆಲಸವಿರಲಿ,ಮಕ್ಕಳನ್ನು ನೋಡಿಕೊಳ್ಳುವ ಕೆಲಸದಾಕೆಯೇ ಆಗಿರಲಿ,ಅತೀ ತಾಳ್ಮೆಯಿಂದ ಮಾಡಬೇಕಾದಂತಹ ಏನೇ ಕೆಲಸವಿರಲಿ ಮಹಿಳೆಯರೇ ಅಂತಹ ಕಾರ್ಯಗಳಿಗೆ ನಿಯೋಜಿಸಲ್ಪಡುತ್ತಾರೆ. ಅವರು ಮಾಡುವ ಕಾರ್ಯದಲ್ಲಿ ಅಷ್ಟೆ ಪ್ರಾಮಾಣಿಕತೆ,ವಸ್ತು ನಿಷ್ಠೆಗಳು ಮೈಗೂಡಿಸಿಕೊಂಡಿರುವುದರಿಂದಲೇ ಮಹಿಳೆಯರಿಗೆ ಆದ್ಯತೆಯನ್ನು ನೀಡಲಾಗುತ್ತದೆ. ಆದರೂ ಸಮಾನತೆ ಎಂಬುದು ಇಂದಿಗೂ ಬಗೆಹರಿಯಲಾರದ ಪ್ರಶ್ನೆಯಾಗಿ ಉಳಿದಿದೆ.

ಗ್ರಾಮಗಳಿಂದ ನಗರಗಳತ್ತ ಮುಖ ಮಾಡಿದರೆ, ಐಟಿ ಬಿಟಿಕಂಪನಿಗಳಲ್ಲಿ ದುಡಿಯುತ್ತಿರುವ ಹೆಣ್ಣು ಮಕ್ಕಳ ಸಂಖ್ಯೆಯಲ್ಲಂತು ಗಣನೀಯ ಹೆಚ್ಚಳ ಕಂಡು ಬರುತ್ತಿದೆ. ರಾತ್ರಿ ಹಗಲು ದುಡಿಯುವುದರಲ್ಲೂ ಮಹಿಳೆ ಸೈ ಎಂದೆನಿಸಿಕೊಂಡಿದ್ದಾಳೆ. ಐಟಿ ಬಿಟಿ ಕ್ಷೇತ್ರಗಳಲ್ಲಿ ಬಹುರಾಷ್ಟ್ರೀಯ ಕಂಪನೆಗಳಲ್ಲಿ ಕಾಲ್ ಸೆಂಟರ್ಗಳಲ್ಲಿ ಅತೀ ತಾಳ್ಮೆಯಿಂದ ಗ್ರಾಹಕರ ಪ್ರಶ್ನೆಗಳಿಗೆ ಉತ್ತರಿಸಬೇಕಾದರೆ, ಅತ್ಯುತ್ತಮವಾಗಿ ನಿರ್ವಹಿಸುವಲ್ಲಿ ಮಹಿಳೆಯರು ತಮ್ಮ ಜಾಣತನವನ್ನು ಮೆರೆದಿದ್ದಾರೆ ಯಾವುದೇ ನೌಕರಿ ಆಗಿದ್ದರೂ ತಮಗೆ ದೊರೆಯುವ ಕನಿಷ್ಠ ಸಂಬಳದಿಂದ ಮನೆಯ ಜವಾಬ್ದಾರಿಯನ್ನು ನಿರ್ವಹಿಸುವುದರಲ್ಲಿಯೂ ಮಹಿಳೆ

ಪುರುಷ ವರ್ಗಕ್ಕಿಂತ ಒಂದು ಹೆಜ್ಜೆ ಮುಂದಿದ್ದಾಳೆ ಮಹಿಳೆಯರು ತಮ್ಮ ಸಮಾನತೆಗೆ ಹೋರಾಟ ನಡೆಸುವಾಗ ಸಮಾಜದ ಎಲ್ಲ ಸ್ತರಗಳಲ್ಲೂ ಸಮಾನತೆಗೆ ಒತ್ತು ಕೊಡುವುದು ಅವಶ್ಯಕ. ಆಗ ಮಾತ್ರ ಸುದೃಢವಾದ ಆರ್ಥಿಕ ತಳಹದಿಯಲ್ಲಿ ಮಹಿಳೆಯು ಎದ್ದು ನಿಲ್ಲಲ್ಲು ಸಾಧ್ಯ ಬರೀ ಆರ್ಥಿಕ ಸಮಾನತೆ ಒಂದೇ ಅಲ್ಲ ಮಹಿಳೆಗೆ ಬೇಕಾಗುವ ಪುರುಷ ಸರಿಸಮಾನ ಹಕ್ಕುಗಳನ್ನು ಯಾರು ತೆಗೆದುಕೊಳ್ಳಿ ಎಂದು ನೀಡುವುದಿಲ್ಲ ಎಂಬುದು ರುಜುವಾತಾದ ಸಂಗತಿ ಎಂದರೆ ತಪ್ಪೆನಿಲ್ಲ ನಮ್ಮ ಸಮಾನತೆಯನ್ನು ನಾವೇ ಇಂತಹ ದಿನಾಚರಣೆಗಳಲ್ಲಿ ಉತ್ತಮ ವಿಚಾರಗಳನ್ನು ಮಾಡಿ ಕ್ರಿಯಾಯೋಜನೆ ಸಿದ್ದಪಡಿಸಿ ಅನುಷ್ಠಾನಗೊಳಿಸುವ ಮೂಲಕ ಪಡೆದುಕೊಳ್ಳಬೇಕು.

ಮಹಿಳೆಯು ನಾಲ್ಕು ಗೋಡೆ ಮಧ್ಯೆಯೇ ಜೀವಿಸಬೇಕಾದವಳಲ್ಲ ಆಕೆಗೂ ಸ್ವಾತಂತ್ರ್ಯದ ಹಕ್ಕು, ಸ್ಥಾನಮಾನದ ಅಗತ್ಯತೆ ಎಂದು ನಿರೂಪಿಸಿದ ನಮ್ಮ ಆಧುನಿಕ ಆದರ್ಶ ಮಹಿಳೆಯರಾದ ಕಿರಣಬೇಡಿ, ಸುಧಾಮೂರ್ತಿ, ಮುಂತಾದ ಮಹಿಳೆಯರನ್ನು ನೋಡಿದಾಗ ಈ ನಾಲ್ಕುಗೋಡೆಯನ್ನು ಯಶಸ್ವಿಯಾಗಿ ದಾಟಿ ಮುಖ್ಯವಾಹಿನಿಗೆ ಬಂದಿದ್ದಾರೆ. ಸ್ವಾತಂತ್ರ್ಯ ಹಕ್ಕು, ಸಮಾನತೆ ಹಕ್ಕು ಎಲ್ಲವೂ ದೊರೆತಿದೆ ಎಂಬಂತಹ ನಿಟ್ಟುಸಿರುವ ಬಿಡುವ ವಾತಾವರಣ ಭಾರತದಲ್ಲಿ ಸೃಷ್ಟಿಯಾಗಿದೆಯೇ ಎಂಬುದನ್ನು ವಿಶ್ಲೇಷಿಸಬೇಕಾಗಿದೆ. ಇಂದು ಸ್ವಾತಂತ್ರ್ಯ ಹಕ್ಕುಗಳಿಗಿಂತ ಮಹಿಳೆಯರ ಪಾಲಿಗೆ ಬೇರೆಯದೆ ತೆರನಾದ ಸಮಸ್ಯೆಗಳು ಆವರಿಸಿಕೊಂಡು ಬಿಟ್ಟಿವೆ ಎನ್ನುವುದಕ್ಕೆ ನಾಗರಿಕ ಸಮಾಜದಲ್ಲಿ ನಡೆಯುತ್ತಿರುವ ಘಟನೆಗಳನ್ನೆ ಗಮನಿಸಿದರೆ ಸಾಕು ಹೆಚ್ಚಿಗೆ ಹೇಳಬೇಕಾದ ಅವಶ್ಯಕತೆ ಇಲ್ಲ ಅಲ್ಲವೇ?

ನೂರು ದಿನಾಚರಣೆಗಳು ನಡೆಸಿದರೂ ಮಹಿಳೆ ಮೇಲಿನ ಆಗುವ ಆಸಿಡ್ ದಾಳಿ, ಅತ್ಯಾಚಾರ, ಲಿಂಗ ಅಸಮಾನತೆ ಆಕೆಯನ್ನು ಗೋಳು ಹೊಯ್ದುಕೊಳ್ಳುವುದು,ಮಹಿಳಾ ಸಿಬ್ಬಂದಿಯ ರಕ್ಷಣೆ,ವರದಕ್ಷಿಣೆ ಹಿಂಸೆ, ಪರುಷರ ವಿಕೃತ ಕ್ರೌರ್ಯ ಇವೆಲ್ಲ ಸುರಳಿಯಲ್ಲಿ ಬಿದ್ದಿರುವುದನ್ನು ಯಾರಿಂದಲೂ ತಪ್ಪಿಸಲಾಗುತ್ತಿಲ್ಲ. ಇವುಗಳಿಗೆ ಬರಿ ಹಣದ ರೂಪದಲ್ಲಿ ಪರಿಹಾರ ನೀಡಿದರೆ ಸಾಲದು ದೌರ್ಜನ್ಯಗಳ ಬೇರು ಸಮೇತ ಕಿತ್ತು ಹಾಕುವ ಪರಿಹಾರವನ್ನು ಕಂಡುಕೊಳ್ಳಬೇಕಾದರೆ ಇದೆಕ್ಕೆಲ್ಲ ಸರಿಯಾದ ಕಾನೂನು ವ್ಯವಸ್ಥೆ ಅಗತ್ಯ.

ಎಲ್ಲದಕ್ಕಿಂತ ಹೀನಾಯ ಘಟನೆಗಳು ಚಿಕ್ಕ ಹೆಣ್ಣುಮಕ್ಕಳ ಮೇಲೆ ಆಗುವ ದೌರ್ಜನ್ಯವಂತು ಹೇಳತೀರದು ಇವಕ್ಕೆಲ್ಲ ಒಂದು ಅಂತ್ಯವನ್ನು ನಾವು ಹಾಡಬೇಕಿದೆ. ಮಹಿಳಾ ದಿನಾಚರಣೆಗೆ ಒಂದು ಅರ್ಥ ಬರಬೇಕಾದರೆ ಇಂತಹ ಹೀನಾಯ ಕೃತ್ಯಗಳಿಗೆ ಅಂತ್ಯ ಹೇಳಲು ನಿಮ್ಮದೊಂದು ಕೈಇರಲಿ. ಪುರುಷ ಸಮಾಜವು ನಿರಂತರವಾಗಿ ಮಹಿಳೆಯರನ್ನು ಶೋಷಣೆಗೆ, ದಬ್ಬಾಳಿಗೆ ಒಳಪಡಿಸುತ್ತಲೇ ಬಂದಿದೆ ಆ ಕಾರಣಕ್ಕಾಗಿ ಮಹಿಳೆ ಇಂದಿಗೂ ತಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡಬೇಕಾಗಿದೆ. ಅವಳ ಸ್ಥಾನಮಾನಕ್ಕಿಂತ ಆಕೆಯ ರಕ್ಷಣೆ ಎಷ್ಟರಮಟ್ಟಿಗಿದೆ ಎಂಬುದನ್ನು ದಿನಬೆಳಗಾದರು ನೋಡುತ್ತಿದೇವೆ ಎಲ್ಲರೊಳಗೊಂದಾಗಿ ಜೀವಿಸುವ, ತಾಳ್ಮೆಯ ಪ್ರತೀಕವಾದ ಹೆಣ್ಣಿಗೆ ಆಗುವ ದೌರ್ಜನ್ಯಗಳನ್ನು ದೇಶದಿಂದಲೇ ತೊಲಗಿಸಿಲು ಅದಕ್ಕಿಂತಲೂ ಮಿಗಿಲಾದ ಹೆಣ್ಣಿನ ರಕ್ಷಣೆಯನ್ನು ಮಾಡುವಂತಹ ಕಾರ್ಯ, ವ್ಯವಸ್ಥೆಯಾದಲ್ಲಿ ಖಂಡಿತಾ ಅಂದು ಮೇರಾ ಭಾರತ ಮಹಾನ್ ಎಂದು ಹೆಮ್ಮೆಯಿಂದ ಹೇಳಿಕೊಳ್ಳಬಹುದು ಮಾರ್ಚ್ 8 ಅಂತರಾಷ್ಟ್ರೀಯಾ ಮಹಿಳಾ ದಿನಕ್ಕೆ ನಿಜವಾದ ಅರ್ಥ ಬರುತ್ತದೆ. ಬನ್ನಿ ಒಗ್ಗೂಡಿ ನಮ್ಮ ಹಕ್ಕುಗಳಿಗಾಗಿ ಹೋರಾಡಿ ಮಹಿಳೆಯರ ಮೇಲಿನ ದೌರ್ಜನ್ಯಗಳಿಗೆ ನಾವೇ ಅಂತ್ಯಗೊಳಿಸಬೇಕು ಹೆಣ್ಣು ಅಬಲೆಯಲ್ಲ ಸಬಲೆ ಎಂದು ಸಾಭೀತುಪಡಿಸಬೇಕು. ಷೋಶಷಣೆಗಳಿಗೆ ತೆರೆ ಎಳೆಯಲು ಕಾರ್ಯೋನ್ಮುಖರಾಗೋಣ. ■

ಅಭಿನಂದನೆಗಳು

ಡಾ॥ ಲೀಲಾದೇವಿ ಪ್ರಸಾದ್, ಡಾ॥ ಶಾಲಿನಿ ರಜನೀಶ್ ಹಾಗೂ ಡಾ॥ ವಿಜಯ ಲಕ್ಷ್ಮಿಮಾನೆ ಈ ಮೂವಾರು ಮಹಿಳೆಯರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿರುವ ಹಿನ್ನಲೆಯಲ್ಲಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರು ಅಭಿನಂದನೆ ಸಲ್ಲಿಸಿದ್ದಾರೆ.

Corporate Governance
Principles, Relevance and Need for Urban Cooperative Bank

- ಶ್ರೀ ಮನೋಹರ ಮಸ್ಕಿ, ಅಧ್ಯಕ್ಷರು ಸುಕೋ ಬ್ಯಾಂಕ್ ನಿ.

(ಸಂಯುಕ್ತ ಸಹಕಾರಿಯು ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಯ ವ್ಯಾಪ್ತಿಗೆ ಒಳಪಟ್ಟಿರುವ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಲೆಕ್ಕಪರಿಶೋಧನಾ ಸಮಿತಿಯ ಅಧ್ಯಕ್ಷರಿಗಾಗಿ ಏರ್ಪಡಿಸಿದ್ದ ತರಬೇತಿ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ ಸುಕೋ ಬ್ಯಾಂಕಿನ ಅಧ್ಯಕ್ಷ ಶ್ರೀ ಮನೋಹರ ಮಸ್ಕಿಯವರು "ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಕಾರ್ಪೋರೇಟ್ ಗವರ್ನನ್ಸ್" ವಿಷಯದ ಬಗ್ಗೆ ನೀಡಿದ ಉಪನ್ಯಾಸದ ಅಧ್ಯಯನ ಸಾಹಿತ್ಯವನ್ನು ಪಟ್ಟಣ ಸಹಕಾರ ಬ್ಯಾಂಕುಗಳ ಮಾಹಿತಿಗಾಗಿ ಹಾಗೂ ಉಪಯೋಗಕ್ಕಾಗಿ ಪ್ರಕಟಿಸಿದೆ.)

Weak link : As observed by Committee on Financial Sector Assessment (CFSA) 2009 UCB Sector remains one of the weak links in the Indian Financial Landscape. High levels of NPAs of UCBs still continue to be the major area of concern.

Besides it, the UCBs are facing problems of –

- Crises of Credibility
- Severe and unhealthy Competition
- Threats to survival
- UCBs exposed to vulnerability of other entities in cooperative sector as a whole
- Problems of individual UCB

One Point Agenda of TAFCUB: Indentifying potentially viable and non viable UCBs in the states and suggest revival path for the viable banks and suggesting non-disruptive exit route for the non-viable ones. This cannot be done without evaluating the standard of Corporate Governance existing in the bank. For debacles of some UCBs and weakness, aberrations in UCB sector, the main reason is lack of Corporate Governance.

ಮನೋಹರ ಮಸ್ಕಿ

Corporate Governance – The concept

- Need for a system for ensuring the protection of legitimate rights and long term values of shareholders and the necessary managerial behavioral/ good management practices.
- Here the concept of Corporate Governance was perceived and introduced in corporate sector.

Corporate Governance – concept & Objectives

"CORPORATE GOVERNANCE is a system by which companies are directed and controlled".

- Protecting the long term interest and enhancing the values of shareholders and other stakeholders (viz., customers, employees, creditors, bankers, regulators and society at large)
- Harmonizing rights & interest of shareholders and stakeholders by continuous exercise of striking balance.
- Reducing the risks normally faced by the company/ organization.
- Responsibility to introduce and effectively implement Corporate Governance is exclusively of Board of Directors in a manner that it becomes way of organizational life and not merely written rules or regulations or code of ethics.
- Ethics & Transparency are cardinals of Corporate Governance.

Evolution and Implementation of the Concept at Global Level.

- Corporate Governance evolved and introduced as remedial in corporate sector for forbidding the wrongs or unethical practices.
- Appointment of Various committees at global level to address the issue and give recommendations.
  - Worldwide economic crisis and corporate debacles have proven the inadequacy of regulatory frame work to bring the best out of corporate management.
  - Establishment of GATT and WTO regulations also emphasized the need of good corporate practices i.e. Corporate Governance.

Corporate Governance in Banking sector.

- OECD principles 1999 also dwelt upon the issue of Corporate Governance.
- Guidelines of Basel Committee on Banking supervision issued to supervisory authorities in different countries. In India….RBI

Corporate Governance in Banking Sector of India

- Social control, amendment of BR Act 1949, nationalization in 1969 and 1980.
- Measures such as directed credit and subsidized interest for needy sectors.
- Implementation of prudential norms.
- Steps by Central Government to divesting its shareholding to 33% in Public Sector Banks.
- Appointment of various committees viz. Narasimhan Committee, Nareshchandra Committee, Narayanmurthy Committee, Dr.Ganguly Committee.
- Deregulation of interest rates and greater autonomy to banks.
- Thrust of RBI on disclosure and transparency norms.
- CAMELS Rating.
- Risk based supervision.

Corporate Governance – The Practical Aspect

- While implementing and practicing the Corporate Governance

it is necessary to examine and introduce certain elements which stand as Hallmarks of Corporate Governance.

- Establishing and well defining strategic objectives and set of corporate values and means to attain them (vision and mission statement).
- Endeavour to enhance the value of stake holders and harmonizing their interests.
- Competent Board with independent disposition assisted by its various committees and senior management.
- Documentation of definition and understanding of the role, duties, responsibilities, accountabilities of the Board, its Committees and Senior Management.
- Appropriate supervision by senior management.
- Transparency at Board level and all levels of the management.
- Comprehensive risk management and control mechanism.
- Effective internal control and audit system.
- Assurance for compliance with applicable statutes.

Corporate Governance – Relevance and Need for Cooperative Banks

- Cooperative organizational structure is very unique and innovative.
- Proper understanding of cooperative culture, cooperative ethics, values and principles is essential to evaluated Corporate Governance in the context of cooperatives.

Regulatory measures taken to introduce the Corporate Governance in UCBs

- Amendments in BR Act 1949, to introduce professionalism in Cooperative Banks.
- RBI guidelines prescribing Dos' and Don'ts for directors.
- Appointment of Madhavdas Committee and its Recommendations in 1978.
- Appointment Narsimhan committee on banking sector reform.
- High Power Committee.
- Joint Parliamentary Committee 2003
- CAMEL Rating Guidelines.
- TAFCUB and MOUs with State or Central Government.
- Risk Based Supervision.
- Risk Management/ Risk Management Audit.

Measures in Cooperative Acts

- Comprehensive provisions for composition of Board representation to various sections of the society.
- Prohibitions on loans and advances to Directors and other restrictive provisions to avoid malpractices.
- Explicit provisions for fixing accountability of the persons involved for financial loss caused to the bank, and also for negligence & false reporting on financial state of affairs of the Bank.
- Provisions for appropriation of profit for sustainable growth, and serving the cause of welfare of employees, promotion of cooperative movement and society at large.
- Norms for Audit Classification.
- Effective provisions for loan recoveries.
- OTS for expediting recoveries.

Hurdles or Lacunae In Implementing corporate Governance

- Inadequate understanding for banking principles at Board and senior management level, obviously because urban co-operative banks are generally floated by common people.
- Ignorance for self-sustainable growth with specific reference to prudential norms.
- Preference to short term achievements at cost of long term objectives.
- Unhealthy competition among the Cooperative Banks.
- Wrong notions of Board of Directors/ CEO about the growth progress of the Bank.
- Connected lending.
- Corrupt practices.
- Misconceptions or ignorance of the Board of Directors about their Role, Accountability and Responsibility.
- Lack of professionalism.
- Chairman or CEO centric functioning.
- Non-remunerative post of elected directors.
- Undue importance to the interests of the borrowers at the cost of welfare depositors.
- Poor Risk Management and Control System.
- Politicization.
- No due importance to or ineffective Internal Audit.
- No statutory restriction on tenure of directorship.
- Importance to electoral merits of directors rather than their qualitative merits.
- Apathy of members/ shareholders.
- Grey areas in dual control.

Measures to Implement and Practice Corporate Governance

Corporate Governance should not merely be at conceptual level. It has to be implemented for proper functioning of the organization. Critics state that it is highly ideal concept and practically just not possible to implement. Worldwide experience confirms that the Corporate Governance can be successfully implemented if there is sincere desire and commitment by adopting following measures:-

A Organizational measure (Measures to be taken within the organization).

B Statutory Measures (Measures to be taken as statutory level).

C Sectorial Measures (Measures to be taken within the UCB Sector).

A Organizational Measures –

A (i) Vision and mission statement and signifying Vision and Mission Statement.

A (ii) Organizational Structure – There should be well defined organizational structure ensuring transparency in the functioning.

A. (iii) Board of Directors and its Committees.

- Board of Directors has very vital role in practicing Corporate Governance.
- Directors are trustees and not owners of the bank.
- Comprehensive due diligence of the directors should be made before their nomination to the board.
- They are expected to represent and protect their respective

to Page 19...

ಭಾರತದ ಆರ್ಥಿಕತೆ ಸವಾಲುಗಳು



(ಮಾನ್ಯ ಅರ್ಥ ಸಚಿವರ ಆಯ-ವ್ಯಯದ ಭಾಷಣದಲ್ಲಿ ಉಲ್ಲೇಖಿತವಾದ ಭಾರತದ ಆರ್ಥಿಕ ಸವಾಲುಗಳ ವಿಶ್ಲೇಷಿಸುವ ಲೇಖನ)

– ಶ್ರೀಕಾಂತ ಬರುವೆ, ಸಹ ಪ್ರಧಾನ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

ಭಾರತದ ಅರ್ಥವ್ಯವಸ್ಥೆ ಹಲವಾರು ಸವಾಲುಗಳನ್ನು ಎದುರಿಸುತ್ತಿದೆ. ಆ ಎಲ್ಲಾ ಸವಾಲುಗಳನ್ನು ಮೆಟ್ಟಿ ನಿಂತು ದೇಶವನ್ನು ವಿದೇಶಿ ಬಂಡವಾಳ ಹೂಡಿಕೆಗೆ ನೆಚ್ಚಿನ ತಾಣವಾಗಿ ಮಾಡುವ ಮೂಲಕ ದೇಶದ ಒಟ್ಟು ದೇಶೀಯ ಉತ್ಪನ್ನವನ್ನು ಹೆಚ್ಚಿಸುವ ಗುರುತರ ಸವಾಲು ದೇಶದ ಮುಂದಿದೆ.

2012ರ ಜಗತ್ತಿನ ಒಟ್ಟು ಉತ್ಪನ್ನ ಬೆಳವಣಿಗೆ ದರ ಶೇಕಡ 3.2 ಆಗಿದ್ದು 2011ಕ್ಕೆ ಹೋಲಿಸಿದರೆ 0.2% ಪ್ರತಿಶತ ಕಡಿಮೆಯಾಗುತ್ತದೆ. ಜಾಗತಿಕ ದೇಶೀಯ ಉತ್ಪನ್ನದ ಬೆಳವಣಿಗೆಯ ದರದಲ್ಲಿನ ಹಿನ್ನೆಡೆ ಭಾರತದ ಆರ್ಥಿಕತೆಯ ಮೇಲೂ ಸಹ ಆಗಿರುತ್ತದೆ. ಭಾರತ ಒಟ್ಟು ದೇಶೀಯ ಉತ್ಪನ್ನದಲ್ಲಿ ಶೇಕಡ 43% ರಷ್ಟು ಆಯಾತ–ನಿರ್ಯಾತ ವ್ಯವಹಾರದಿಂದ ಬರುತ್ತದೆ. ಆದರೆ 2011–12ನೇ ಇಸವಿಯಲ್ಲಿ ಆಯಾತ–ನಿರ್ಯಾತ ವ್ಯವಹಾರದ ಇಳಿತದ ಅಡ್ಡಪರಿಣಾಮವು ಒಟ್ಟು ದೇಶೀಯ ಉತ್ಪನ್ನದ ಬೆಳವಣಿಗೆಯ ಮೇಲೂ ಸಹ ಆಗಿದೆ.

ಈ ಮೇಲಿನ ಅಂಕಿ–ಅಂಶಗಳ ಕಾರಣದಿಂದ ಭಾರತವು ನಿರಾಶವಾಗ ಬೇಕಿಲ್ಲ. ಭಾರತದ ಆರ್ಥಿಕತೆಯು ತನ್ನದೆ ಆದ ವಿಶಿಷ್ಟತೆಯ ಕಾರಣ ಎಲ್ಲಾ ಸವಾಲುಗಳನ್ನು ಮೆಟ್ಟನಿಲ್ಲುವ ಛಾತಿಯನ್ನು ಹೊಂದಿದೆ. 2012–13ನೇ ಸಾಲಿನಲ್ಲಿ ಚೀನಾ ಮತ್ತು ಇಂಡೋನೇಷ್ಯಾ ರಾಷ್ಟ್ರಗಳು ಮಾತ್ರ ಭಾರತಕ್ಕಿಂತ ವೇಗದ ಅಭಿವೃದ್ಧಿಯನ್ನು ದಾಖಲಿಸಿವೆ. ಹಲವರ ಭವಿಷ್ಯವಾಣಿ ಏನೆಂದರೆ 2013–14ನೇ ಸಾಲಿನಲ್ಲಿ ಚೀನಾ ಮಾತ್ರ ಭಾರತಕ್ಕಿಂತ ವೇಗದ ಅಭಿವೃದ್ಧಿಯನ್ನು ದಾಖಲಿಸಲಾಗಿದ್ದು ನಂತರದ ಸ್ಥಾನ ಭಾರತದ್ದಾಗಿರುತ್ತದೆ ಎಂಬುದು, ಇದಕ್ಕೆ ಪೂರಕವೆನ್ನುವಂತೆ ಕೇಂದ್ರ ಸಾಂಖ್ಯಿಕ ಕಛೇರಿಗಳು (CSO - Central Statistics Offices)ಗಳು ಭಾರತವು 2013–14ನೇ ಸಾಲಿನಲ್ಲಿ 5 ಪ್ರತಿಶತ ಬೆಳವಣಿಗೆ ದಾಖಲಿಸಲಿವೆ, ಎಂದು ಹೇಳಿರುವುದು ಭಾರತದ ಆರ್ಥಿಕತೆಯ ಕುರಿತು ಆಶಾಕಿರಣ ಮೂಡಿಸುತ್ತದೆ.

ಭಾರತದ ಮುಂದಿರುವ ಪ್ರಮುಖ ಸವಾಲೆಂದರೆ ಸಬ್ಸಿಡಿಯ ನಿಯಂತ್ರಣ, ಕೇಂದ್ರ ಸರ್ಕಾರವು ವಿವಿಧ ರೀತಿಯ ಸಬ್ಸಿಡಿಗಳನ್ನು ರಾಷ್ಟ್ರದ ಸಾರ್ವಜನಿಕರಿಗೆ ನೀಡುತ್ತದೆ. ಇದು ರಾಷ್ಟ್ರದ ಪ್ರಗತಿಯ ಮೇಲೆ ದೂರಗಾಮಿ ಪರಿಣಾಮ ಬೀರುವುದರಲ್ಲಿ ಸಂಶಯವಿಲ್ಲ. 2012–13ನೇ ಸಾಲಿನ ಆರ್ಥಿಕ ಸಮೀಕ್ಷೆಯಲ್ಲಿ ತಿಳಿಸಿರುವಂತೆ ಪೆಟ್ರೋಲಿಯಂ ಉತ್ಪನ್ನಗಳಿಗೆ ಸಂಬಂಧಿಸಿದ ಸಬ್ಸಿಡಿಗಳ ಬಿಲ್ ಹೆಚ್ಚಿದಂತೆ ಹಣಕಾಸಿನ ಗುರಿಗಳಿಗೆ ಗಣನೀಯ ಪೆಟ್ಟು ಬೀಳುತ್ತದೆ.

ಸರ್ಕಾರ ಹಣದುಬ್ಬರವನ್ನು ನಿಯಂತ್ರಣದಲ್ಲಿಡಬೇಕಾದರೆ ಖರ್ಚನ್ನು ಕಡಿಮೆ ಮಾಡಬೇಕು. ದುರಾದುಷ್ಟವಶಾತ ಭಾರತ ಸರ್ಕಾರ ಆದಾಯಕ್ಕಿಂತ ಹೆಚ್ಚು ಖರ್ಚು ಮಾಡುತ್ತಿದೆ. ಕೊರತೆಯ ಆಯ–ವ್ಯಯ ಮಂಡಿಸುವುದನ್ನು ಎಲ್ಲಾ ಕೇಂದ್ರ ಸರ್ಕಾರಗಳು ಪ್ರತಿಷ್ಠೆಯನ್ನಾಗಿ ಮಾಡಿಕೊಂಡಿವೆ (ಮುರಾರ್ಜಿ ದೇಸಾಯಿ ಸರ್ಕಾರವನ್ನು ಹೊರತುಪಡಿಸಿ ಉಳಿದೆಲ್ಲಾ ಸರ್ಕಾರಗಳು ಕೊರತೆ ಬಜೆಟ್ ಮಂಡಿಸಿವೆ. ಈ ಅವಧಿಯೊಂದರಲ್ಲಿ ಮಾತ್ರ ಮಿಗತೆ ಆಯ–ವ್ಯಯ ಮಂಡಿಸಲಾಗಿತ್ತು).

2012–13ನೇ ಸಾಲಿನ ಸಬ್ಸಿಡಿ ಬಿಲ್ (ಪ್ರಮುಖವಾಗಿ ತೈಲ, ಆಹಾರ, ರಸಗೊಬ್ಬರ) ಸುಮಾರು ರೂ.1,90,015/– ಕೋಟಿಗಳಷ್ಟಿದೆ ಎಂದು ಅಂದಾಜಿಸಲಾಗಿದೆ. 2011–12 ಮತ್ತು 2012–13ರ ಆರ್ಥಿಕ ಪರಿಣಾಮಗಳಿಂದ ಉದ್ಭವವಾಗುವ ಪ್ರಮುಖ ಪಾಠವೆಂದರೆ, ಅನಿಶ್ಚಿತತೆ ಹೆಚ್ಚಾಗಿ ಕಾಡುತ್ತಿರುವ ಸಮಯದಲ್ಲಿ ಸೂಕ್ಷ್ಮ ಪರಿಶೀಲನೆಯ ಮೂಲಕ ಅಪಾಯದ ಮೌಲ್ಯಾಂಕನವನ್ನು ನಿರಂತರವಾಗಿ ಮಾಡುತ್ತಿರಬೇಕು ಮತ್ತು ಸರಿಯಾದ ಕ್ರಮಗಳನ್ನು ಅನುಸರಿಸಿ ಉತ್ತಮ ಆರ್ಥಿಕ ಗುರಿಗಳನ್ನು ತಲುಪಲು ಪ್ರಯತ್ನಿಸಬೇಕು ಎಂಬುದು.

ಭಾರತದ ಆರ್ಥಿಕತೆ ಎದುರಿಸುತ್ತಿರುವ ಪ್ರಮುಖ ಸವಾಲುಗಳು ಈ ಕೆಳಕಂಡಂತಿವೆ.

1) **ಹಣದುಬ್ಬರ :** ಹಣದುಬ್ಬರ ಭಾರತದ ಆರ್ಥಿಕತೆ ಎದುರಿಸುತ್ತಿರುವ ಪ್ರಮುಖ ಸಮಸ್ಯೆ. ಪೆಟ್ರೋಲಿಯಂ ಉತ್ಪನ್ನದ ದರಗಳಲ್ಲಿ ಏರಿಕೆ, ಆಸ್ತಿ ಮೌಲ್ಯದಲ್ಲಿ ಏರಿಕೆ, ಆಹಾರ ಪದಾರ್ಥಗಳ ದರದಲ್ಲಿ ಏರಿಕೆ ಹಣದುಬ್ಬರ ಸಮಸ್ಯೆಯ ಉಲ್ಬಣಕ್ಕೆ ಕಾರಣವಾಗಿದೆ. ಜನವರಿ 2013ಕ್ಕೆ ಭಾರತದ ಹಣದುಬ್ಬರ ದರ ಶೇಕಡ 6.62 ಪ್ರತಿಶತವಾಗಿದೆ. 1969 ರಿಂದ 2013ರವರೆಗೆ ಭಾರತದ ಸರಾಸರಿ ಹಣದುಬ್ಬರ ದರ ಶೇಕಡ 7.8 ಪ್ರತಿಶತವಾಗಿರುತ್ತದೆ. ಇದರುವರೆಗೆ ದಾಖಲಾಗಿರುವ ಭಾರತದ ಗರಿಷ್ಠ ಹಣದುಬ್ಬರ ದರ 34.7 1974 ಸೆಪ್ಟೆಂಬರ್‌ನಲ್ಲಿ ದಾಖಲಾಗಿತ್ತು. ಇದುವರೆಗೆ ದಾಖಲಾಗಿರುವ ಭಾರತದ ಕನಿಷ್ಠ ಹಣದುಬ್ಬರ ದರ 11.3 ಪ್ರತಿಶತ 1976 ಮೇನಲ್ಲಿ ದಾಖಲಾಗಿರುತ್ತದೆ.

2) **ಶೈಕ್ಷಣಿಕ ಗುಣಮಟ್ಟ :** 2011ನೇ ಇಸವಿಯಲ್ಲಿ ಭಾರತದ ಶೈಕ್ಷಣಿಕ ದರ ಶೇಕಡ 74.04 ಪ್ರತಿಶತವಿದ್ದು, ಪುರುಷ ಶೈಕ್ಷಣಿಕ ದರ 82.14% ಇದ್ದರೆ ಮಹಿಳೆಯರ ಶೈಕ್ಷಣಿಕ ದರ ಶೇಕಡ 65.46% ದರ ಇರುತ್ತದೆ. ಶೇಕಡ 34.54% ಪ್ರತಿಶತದಷ್ಟು ಮಹಿಳೆಯರು ಸಾಕ್ಷರತೆ ಹೊಂದದೆ ಇರುವುದು ಭಾರತದ ಆರ್ಥಿಕತೆ ಎದುರಿಸುತ್ತಿರುವ ಪ್ರಮುಖ ಸವಾಲಿನಲ್ಲಿ ಒಂದಾಗಿದೆ.

3) **ಮೂಲಭೂತ ಸೌಲಭ್ಯ :** ಭಾರತದಲ್ಲಿ ಮೂಲಭೂತ ಸೌಲಭ್ಯಗಳಾದ ನೀರು, ರಸ್ತೆ, ವಿದ್ಯುಚ್ಛಕ್ತಿ, ಸಾರಿಗೆ ಮುಂತಾದ ಸೌಕರ್ಯಗಳು ಉತ್ತಮ ಗುಣಮಟ್ಟದಲ್ಲಿ ಇಲ್ಲದಿರುವುದು ಭಾರತದ ಆರ್ಥಿಕ ಹಿನ್ನೆಡೆಗೆ ಪ್ರಮುಖ ಕಾರಣವಾಗಿದೆ. ವಿದ್ಯುಚ್ಛಕ್ತಿಯಲ್ಲಿ ಗುಜರಾತ್ ರಾಜ್ಯವನ್ನು ಹೊರತುಪಡಿಸಿ ಬೇರ್‍ಯಾವುದೇ ರಾಜ್ಯಗಳು ವಿದ್ಯುಚ್ಛಕ್ತಿ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿರುವುದಿಲ್ಲ. ಶೇ 40%ರಷ್ಟು ಹಣ್ಣುಗಳು ಮಾರುಕಟ್ಟೆಯನ್ನು ತಲುಪುವ ಮುನ್ನವೇ ಕೊಳೆತು ಹೋಗುತ್ತವೆ. ಇದು ಕಳಪೆ ಮೂಲಭೂತ ಸೌಲಭ್ಯಕ್ಕೆ ಹಿಡಿದಿರುವ ಕನ್ನಡಿಯಾಗಿದೆ.

4) **ಕ್ಷೀಣಿಸುತ್ತಿರುವ ವಿದೇಶಿ ವಿನಿಮಯಗಳಿಕೆ :** ಸಾಕಷ್ಟು ವಿದೇಶಿ ವಿನಿಮಯ ಸಂಗ್ರಹವನ್ನು ಹೊಂದಿರುವುದು ರಾಷ್ಟ್ರದ ಆರ್ಥಿಕತೆಯ ಸದೃಢತೆಯನ್ನು ತೋರಿಸುತ್ತದೆ. ಇತ್ತೀಚೆಗೆ ಭಾರತದ ವಿದೇಶಿ ವಿನಿಯಮ ಸಂಗ್ರಹವು ಕಡಿಮೆಯಾಗುತ್ತಿರುವುದರಿಂದ ಸಮಸ್ಯೆ ಎದುರಿಸುವಂತಾಗಿದೆ. 22, ಫೆಬ್ರವರಿ 2013ಕ್ಕೆ ಭಾರತದ ವಿದೇಶಿ ವಿನಿಯಮ ಸಂಗ್ರಹ 291,916.00 ಮಿಲಿಯನ್ ಅಮೆರಿಕನ್ ಡಾಲರ್ ಆಗಿರುತ್ತದೆ. ಕಳೆದ ವರ್ಷ ಅಂದರೆ 27 ಜನವರಿ 2012ಕ್ಕೆ ಭಾರತದ ವಿದೇಶಿ ವಿನಿಮಯ ಸಂಗ್ರಹ 293,930.1 ಅಮೆರಿಕನ್ ಡಾಲರ್ ಆಗಿತ್ತು. ಕಳೆದ ವರ್ಗಕ್ಕೆ ಹೋಲಿಸಿದರೆ 2014.01ರಷ್ಟು ಬಿಲಿಯನ್ ಅಮೆರಿಕನ್ ಡಾಲರ್ ವಿದೇಶಿ ವಿನಿಮಯ ಸಂಗ್ರಹ ಕಡಿಮೆ ಆದಂತಾಗಿದೆ. ವಿದೇಶಿ ವಿನಿಯಮ ಸಂಗ್ರಹದಲ್ಲಿ ಇಳಿಕೆ ಭಾರತದ ಆಮದು ಸಾಮರ್ಥ್ಯವನ್ನು ಕುಗ್ಗಿಸುತ್ತದೆ.

5) **ಸಾಲದ ಹೊರೆ :** ಭಾರತವು ವಿಶ್ವಬ್ಯಾಂಕ್ ಸೇರಿದಂತೆ ಹಲವು ಮೂಲಗಳಿಂದ ಹೆಚ್ಚಿನ ಸಾಲಗಳನ್ನು ಪಡೆದಿದ್ದು, ಸದರಿ ಸಾಲಗಳು ಮೇಲೆ ಮರುಪಾವತಿಸುತ್ತಿರುವ ಬಡ್ಡಿ ಮತ್ತು ಸಾಲದ ಮೊತ್ತದ ಮರುಪಾವತಿ ಭಾರತದ ಅರ್ಥವ್ಯವಸ್ಥೆಗೆ ಒಂದು ಕಠಿಣ ಸವಾಲು.

2012ರ ಮಾರ್ಚ್ ಅಂತ್ಯಕ್ಕೆ ಭಾರತವು 345.8 ಬಿಲಿಯನ್ ಡಾಲರ್ ಸಾಲವನ್ನು ಪಡೆದಿರುತ್ತದೆ. 2011ರ ಮಾರ್ಚ್ ಅಂತ್ಯಕ್ಕೆ ಇದು 305.9ರಷ್ಟಿತ್ತು. ವಿಶ್ವಬ್ಯಾಂಕ್ ವರದಿಯನ್ವಯ ಚೀನಾ, ರಷ್ಯಾ, ಬ್ರೆಜಿಲ್ ಮತ್ತು ಟರ್ಕಿ ನಂತರ ಭಾರತವು ಹೆಚ್ಚು ಸಾಲವನ್ನು ಪಡೆದಿರುವ ದೇಶವಾಗಿದೆ. ಭಾರತದ ಒಟ್ಟು ಆಂತರಿಕ ಉತ್ಪನ್ನಕ್ಕೆ ಹೋಲಿಸಿದರೆ ಪಾಕಿಸ್ತಾನ, ಇಂಡೋನೇಷ್ಯಾ ಮತ್ತು ಫಿಲಿಪೈನ್ಸ್ ನಂತರ ಭಾರತ ಹೆಚ್ಚು ಸಾಲ ಪಡೆದಿರುವ ರಾಷ್ಟ್ರವಾಗಿದೆ.

6) **ಹೆಚ್ಚುತ್ತಿರುವ ಆರ್ಥಿಕ ಅಸಮಾನತೆ :** ಬಡವರು ಹೆಚ್ಚು ಬಡವರಾಗುತ್ತಿದ್ದಾರೆ ಮತ್ತು ಶ್ರೀಮಂತರು ಹೆಚ್ಚು ಶ್ರೀಮಂತ ರಾಗುತ್ತಿದ್ದರೆಯೇ ವಿನಃ ಬಡವರು ಮತ್ತು ಶ್ರೀಮಂತರು ನಡುವಿನ ಅಂತರ ಕಡಿಮೆಯಾಗುತ್ತಿಲ್ಲ. ಭಾರತದಲ್ಲಿ 78 ಮಿಲಿಯನ್ ಮನೆಗಳಿಗೆ ವಿದ್ಯುಚ್ಛಕ್ತಿ ಸಂಪರ್ಕ ಇರುವುದಿಲ್ಲ. ಭಾರತದಲ್ಲಿ 260 ಮಿಲಿಯನ್ ಜನರು ದಿನ ಒಂದಕ್ಕೆ 55 ರೂಪಾಯಿಗಳಿಗೂ ಕಡಿಮೆ ಆದಾಯ ಹೊಂದಿದವರಾಗಿರುತ್ತಾರೆ ಈ ಅಂತರವನ್ನು ಕಡಿಮೆ ಮಾಡುವುದರ ಮೂಲಕ ಭಾರತದ ಆರ್ಥಿಕತೆಯನ್ನು ಸದೃಢಗೊಳಿಸುವುದು ಭಾರತದ ಮುಂದಿರುವ ಸವಾಲು.

7) **ಬೃಹತ್ ಪ್ರಮಾಣದ ವಿತ್ತೀಯ ಕೊರತೆ :** ಭಾರತದಲ್ಲಿ ವಿತ್ತೀಯ ಕೊರತೆ ಬೃಹತ್ ಪ್ರಮಾಣದಲ್ಲಿ ಅಸ್ಥಿತ್ವದಲ್ಲಿದ್ದು ಸಬ್ಸಿಡಿಯನ್ನು ಹೊರತುಪಡಿಸಿ ಇದು ಜಿಡಿಪಿಯ ಶೇಕಡ 8 ಪ್ರತಿಶತದಷ್ಟಿದೆ. ಇದು ರಾಷ್ಟ್ರದ ಅರ್ಥವ್ಯವಸ್ಥೆ ಎದುರಿಸುತ್ತಿರುವ ಪ್ರಮುಖ ಸವಾಲಾಗಿದ್ದು ವಿತ್ತೀಯ ಕೊರತೆಯನ್ನು ಕಡಿಮೆ ಮಾಡುವುದು ಅವಶ್ಯಕವಾಗಿದೆ.

ಭಾರತ ಜಾಗತಿಕ ಹಿಂಜರಿತದ ಮಧ್ಯೆಯು ತಲೆ ಎತ್ತಿ ನಿಂತು ತನ್ನ ಸಾಮರ್ಥ್ಯವನ್ನು ಜಗತ್ತಿಗೆ ಪ್ರಸ್ತುತಪಡಿಸಿದೆ. ಎಲ್ಲಾ ಸವಾಲುಗಳನ್ನು ದೃಢವಾಗಿ ಎದುರಿಸಿ ದೇಶವನ್ನು ಪ್ರಗತಿಯತ್ತ ಕೊಂಡಯ್ಯುವ ಸಾಮರ್ಥ್ಯ ದೇಶದ ಆರ್ಥಿಕ ತಜ್ಞರಿಗಿದ್ದು, ಅದಕ್ಕೆ ಸೂಕ್ತ ಸಮಯಾವಕಾಶ ಬೇಕಷ್ಟೆ.

...from page 17

...Principles, Relevance and Need for Urban Cooperative Bank

section of the society and bring their professional wisdom and expertise into functioning of the bank.

- They should be competent and independent and should have clear understanding of their supervisory role, their responsibilities and accountability.
- They should exercise their powers collectively and not individually.
- They should not get involved themselves in day to day affairs of the bank.

A. (iii) Role of CEO: The role of CEO is very significant. His role is of giving direction to the stream while remaining himself in the stream.

A. (iv) Controlling measures: For any bank audit and risk management functions are very vital. Hence the roles of Risk Management Committee.

- For banking business assessment and management of various types of risks is crucial and demands high degree of skills.
- It should consist of three/ four directors, one/ two of them should have professional background.
- The main function of the Risk Management Committee is to identify and assess the risks in banking business and give necessary feed back to the Board and Audit Committee, to take business decisions and take necessary control measures respectively.

Conclusion –

- Realize the strength of the UCB sector. UCB are important and effective tool for financial inclusion and powerful alchemy for social reforms and transformation.
- Practicing of Corporate Governance is in the ultimate interest of the bank which is necessary to enjoy the confidence of stakeholders and Regulators.
- UCBs should proactively adopt Corporate Governance and should not wait for its imposition by statute.
- Corporate Governance may not be solution on each and every problem of the bank. It may not a “Panacea” but it is certainly a “Panayam” for good health of the cooperative bank.
- The Major challenge before UCBs today, is to build up and enhance their capacity to integrate themselves with their national and global counterparts without sacrificing their own cultural ethos. The Corporate Governance plays very crucial and vital role in this endeavor.

Audit Committee is the Important committee for successful implementing Corporate Governance.which should consists of the Chairman, three/ four Directors, one or more of such directors should be Chartered Accountant of have experience in management, finance, accountancy, audit etc.

- CEO or any other operational head should not be the member of this committee.

Swabhimani Sahakari, Monthly, Posted at GPO-MBC Bengaluru Post Office 560001,
Posting Day 12th. Registered No. RNP/BGS/2094/2011-13
RNI No. KARBIL - 2004/18001
Pages 20

ವ್ಯಕ್ತಿ ಪರಿಚಯ

ಸಹಕಾರ ಕ್ಷೇತ್ರ ಪ್ರಬಲವಾದರೆ ಜನರಿಗೆ ಉತ್ತಮ ಸೇವೆ-ಸೌಲಭ್ಯಗಳನ್ನು ಒದಗಿಸಲು ಸಾಧ್ಯ.

– ಶ್ರೀ ಎಂ.ಎಂ.ಲಕ್ಷ್ಮೀನಾರಾಯಣ

ಸಹಕಾರ, ರಾಜಕೀಯ, ಸಮಾಜ ಸೇವೆ ಹೀಗೆ ವಿವಿಧ ಕ್ಷೇತ್ರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವ ಶ್ರೀ ಎಂ.ಎಂ.ಲಕ್ಷ್ಮೀನಾರಾಯಣ ಅವರು 19.12.1950ರಂದು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ತೂದೂರಿನಲ್ಲಿ ಜನನ. ತಂದೆ ಶ್ರೀ ಎಂ.ಮಹಾಬಲ. ತಾಯಿ ಶ್ರೀಮತಿ ಕಾವೇರಮ್ಮ. ಕೃಷಿ ಕುಟುಂಬದ ಇವರು ಎಸ್.ಎಸ್.ಎಲ್.ಸಿ. ಶಿಕ್ಷಣವನ್ನು ಮುಗಿಸಿದ ನಂತರ ವ್ಯಾಪಾರದ ವೃತ್ತಿ ನಿರ್ವಹಿಸುತ್ತಿದ್ದಾರೆ. ಪ್ರಸ್ತುತ ತೀರ್ಥಹಳ್ಳಿಯಲ್ಲಿ ವಾಸವಾಗಿದ್ದಾರೆ.

ರಾಮೇಶ್ವರ ಬಹು ಉದ್ದೇಶಿ ಸೌಹಾರ್ದ ಸಹಕಾರಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದ ಇವರು 21 ಆಗಸ್ಟ್ 2010ರಲ್ಲಿ ಸೌಹಾರ್ದ ಸಹಕಾರ ಕಾಯ್ದೆಯಡಿ ನೋಂದಣಿಯಾಗಿ ಕಾರ್ಯನಿರ್ವಹಿಸುತ್ತಿರುವ ಕವಲೇದುರ್ಗ ಬಹು ಉದ್ದೇಶಿ ಸೌಹಾರ್ದ ಸಹಕಾರಿಯ ಸ್ಥಾಪಕ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇದಲ್ಲದೇ ತಮ್ಮದೇ ಆದ ವ್ಯಾಪಾರೋದ್ಯಮವನ್ನೂ ಕೂಡ ಹೊಂದಿದ್ದು ಶ್ರೀ ವಿನಾಯಕ ಎಂಟರ್‌ಪ್ರೈಸಸ್, ಶ್ರೀ ವಿನಾಯಕ ಏಜೆನ್ಸಿಸ್, ಶ್ರೀ ವಿನಾಯಕ ಟ್ರಾನ್ಸ್‌ಪೋರ್ಟ್ ಇವುಗಳನ್ನು ತೀರ್ಥಹಳ್ಳಿಯಲ್ಲಿ ನಡೆಸುತ್ತಿದ್ದಾರೆ. ಶ್ರೀಯುತರು ತೀರ್ಥಹಳ್ಳಿಯ ನಗರಸಭೆಯ ಮಾಜಿ ಉಪಾಧ್ಯಕ್ಷರಾಗಿ, ಲಾರಿ ಮಾಲೀಕರ ಸಂಘ ಮಾಜಿ ಅಧ್ಯಕ್ಷರಾಗಿ, ಭಾರತೀಯ ಜನತಾ ಪಾರ್ಟಿ ತಾಲ್ಲೂಕು ಘಟಕದ ಮಾಜಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುತ್ತಾರೆ. ಪ್ರಸ್ತುತ ಕೆನಲ್ ಕ್ಲಬ್ ಅಧ್ಯಕ್ಷರಾಗಿ, ತಾಲ್ಲೂಕು ಭಂಟರ ಸಂಘದ ಖಜಾಂಚಿಯಾಗಿ, ಶ್ರೀ ರಾಮೇಶ್ವರ ದೇವಸ್ಥಾನ ಅಭಿವೃದ್ಧಿ ಸಮಿತಿಯ ಸಂಚಾಲಕರಾಗಿ ಹಾಗೂ ಕೃಷಿಕ್ ಪರಿವರ್ತನ್ ಟ್ರಸ್ಟ್, ನಿರ್ದೇಶಕರಾಗಿ ತೀರ್ಥಹಳ್ಳಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಶ್ರೀಯುತರು ಅಧ್ಯಕ್ಷರಾಗಿರುವ ಕವಲೇದುರ್ಗ ಸೌಹಾರ್ದ ಸಹಕಾರಿಯು 2ಕೋಟಿಗಳಷ್ಟು ವ್ಯವಹಾರವನ್ನು ನಡೆಸುತ್ತಿದ್ದು, ಸದಸ್ಯರಿಗೆ ಹಣಕಾಸಿನ ಸೌಲಭ್ಯಗಳಲ್ಲದೇ ಸಾರ್ವಜನಿಕರಿಗೆ ಅನೇಕ ವಿಧದ ಉತ್ತಮ ಸೇವೆಗಳನ್ನು ಒದಗಿಸುತ್ತಿದೆ. ಉಚಿತ ವಿವಾಹ ನೋಂದಣಿ ಕೇಂದ್ರ (ವಧು-ವರಾನ್ವೇಷಣೆ ಮಾಹಿತಿ ಕೇಂದ್ರ) ನಡೆಸುತ್ತಿರುವುದು ಇದರ ವಿಶೇಷ. ಮಾರುಕಟ್ಟೆ ಕ್ಷೇತ್ರದಲ್ಲಿ ಕೊಳ್ಳುವವರಿಗೆ-ಮಾರುವವರಿಗೆ ಸಂಪರ್ಕ ಸೇತುವೆಯಾಗಿ ಮಧ್ಯವರ್ತಿಯಾಗಿ ಕಾರ್ಯನಿರ್ವಹಿಸುತ್ತಿದೆ. ಇವರು ಸಹಕಾರಿ ವತಿಯಿಂದ ಐ.ಎ.ಎಸ್., ಐ.ಎಫ್.ಎಸ್., ಕೆ.ಎ.ಎಸ್., ಮಾಡಲು ಪ್ರೋತ್ಸಾಹ ನೀಡುವ ಸಲುವಾಗಿ ಕಳೆದ ಸಾಲಿನಲ್ಲಿ ಒಂದು ತರಬೇತಿ ಕ್ಯಾಂಪ್‌ನ್ನು ಆಯೋಜಿಸಿದ್ದರು. ಕಳೆದ ವರ್ಷ ಮಿಲಿಟರಿ ಕ್ಯಾಂಪ್ ಆಯೋಜಿಸಿ, ತರಬೇತಿಗೆ ಅಗತ್ಯವಾದ ಸೌಕರ್ಯ, ಊಟೋಪಚಾರ ವ್ಯವಸ್ಥೆಗಳನ್ನು ಒದಗಿಸಿದ್ದರು. ಫೋನ್ ಬಿಲ್ ಕಲೆಕ್ಷನ್ ಇತ್ಯಾದಿಗಳ ಮೂಲಕ ಸಾರ್ವಜನಿಕರಿಗೆ ಸಹಾಯವಾಗುವಂತಹ ಕಾರ್ಯಗಳನ್ನು ಸಹಕಾರಿಯ ಮೂಲಕ ಇ-ಬೈಕ್‌ನ್ನು ಮೊಟ್ಟ ಮೊದಲ ಬಾರಿಗೆ ಜಾರಿಗೆ ತಂದಿದ್ದಾರೆ. ಮುಂದಿನ ದಿನಗಳಲ್ಲಿ ಅಡಿಕೆ ವ್ಯಾಪಾರಕ್ಕೆ ಸಿದ್ಧತೆ, ಪ್ಯಾನ್‌ಕಾರ್ಡ್, ಪಾಸ್‌ಪೋರ್ಟ್ ನೀಡಿಕೆ ಮುಂತಾದ ಸೌಲಭ್ಯಗಳನ್ನು ಒದಗಿಸುವ ಮೂಲಕ ಸಾರ್ವಜನಿಕರಿಗೆ ಇನ್ನೂ ಹೆಚ್ಚಿನ ಸೇವೆಗಳನ್ನು ಒದಗಿಸುವ ಉದ್ದೇಶವನ್ನು ಹೊಂದಿದ್ದಾರೆ.

– ದಿವ್ಯ ಟಿ., ಕರಾಸೌಸನಿ, ಬೆಂಗಳೂರು.

SWABHIMANI SAHAKARI

Form IV (See Rule-8)

1.	Place of Publication	:	Bangalore, Karnataka
2.	Periodicity of its Publications	:	Monthly
3.	Printer's Name	:	Karnataka State Souharda Federal Co- .op. Ltd
	Whether Citizen of India	:	Yes
	If foreigner, State the country of origin		
	Address	:	Nirmana Bhvana Dr. Rajkumar Road, 1st Block Rajaji nagar, Bangalore -560010
4.	Editor's Name	:	SharanGowda G.Patil
	Whether Citizen of India	:	Yes
	If foreigner, State the country of origin		
	Address	:	Nirmana Bhvana Dr. Rajkumar Road, 1st Block Rajaji nagar, Bangalore - 560010.
5.	Name and Address of individuals who	:	Karnataka State Souharda Federal Co.op. Ltd Nirmana Bhvana Dr. Rajkumar Road, 1st Block Rajaji nagar, Bangalore -560010

own the Newspaper and partners, or share holders holding more than percent of the total capital I, SharanGowda G.Patil here by declare that the particulars given above are true to the best of my knowledge and belief.

Sd/-

Bangalore
8th February 2013

Sharan gouwda G.Patil
Signature of the Publisher / Editor

Edited, Printed and Published by SharanGouda G. Patil –Managing Director, on behalf of Karnataka State Souharada Federal Co operative, Nirman Bhavan complex, Dr. Rajkumar Road, 1st Block, Rajajinagar, Bangalore-560 010